www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–04 ಎಪ್ರಿಲ್ 2015
Volume : IX Issue : 04 April 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಡಿಜಿಎಂ ಬೇತೇಲ್ ಅಂಕಣ
3. ದೇವರು ನಮಗೆ ನೀಡಿದ ಕೃಪೆಗಾಗಿ ಪ್ರತಿ ನಿತ್ಯವೂ ಸ್ತೋತ್ರ ಸಲ್ಲಿಸೋಣ
4. ತಕ್ಕ ಶಾಸ್ತಿ
5. ಸಾಕ್ಷಿಯ ಸ್ವರ
6. ಸ್ಥಳೀಯ ಮತ್ತು ವಿದೇಶ ಸುದ್ಧಿ
7. ಆರೋಗ್ಯ ಸ್ವರ
8. ನೀತಿವಂತನ ಆಶೀರ್ವಾದಗಳು
9. ಜಯದ ಜೀವಿತ
10. ಮಹಿಳೆಯರ ಸ್ವರ
11. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ/ಸಹೋದರಿಯರಿಗೆ ನನ್ನ ವಂದನೆಗಳು. ಕರ್ತನಾದ ಯೇಸುಕ್ರಿಸ್ತನು ಈ ಲೋಕಕ್ಕೆ ಬಂದಂತಹ ಉದ್ದೇಶ ಪ್ರತಿ ಮನುಷ್ಯನನ್ನು ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಮಾಡಿ ಪರಲೋಕ ರಾಜ್ಯಕ್ಕೆ ಸೇರಿಸುವ ಸಲುವಾಗಿ ಯೇಸುಕ್ರಿಸ್ತನು ಬಂದನು. ಅನೇಕರು ಭಾರತದಲ್ಲಿರುವಾಗ ಯುರೋಪ್‌ಗೆ, ಅಮೇರಿಕಕ್ಕೆ ಒಂದು ಸಲ ಆದರೂ ಜೀವಿತದಲ್ಲಿ ಹೋಗಿ ಬರಲು ಬಯಸುತ್ತಾರೆ. ಕೆಲವರು ಆ ದೇಶಗಳಲ್ಲಿಯೇ ನೆಲೆಸಲು ಬಯಸುತ್ತಾರೆ. ಎಲ್ಲಕ್ಕಿಂತಲೂ ಉತ್ತಮವಾದ, ರಮ್ಯವಾದ, ಮನೋಹರವಾದ ದೇಶ ಪರಲೋಕವಾಗಿದೆ. ಅಲ್ಲಿ ದು:ಖವಿಲ್ಲ, ಗೋಳಾಟವಿಲ್ಲ, ನೋವಿಲ್ಲ, ರೋಗವಿಲ್ಲ, ಮರಣವಿಲ್ಲ. ಸಂತೋಷ ಮತ್ತು ಆನಂದ ತುಂಬಿದ ದೇಶವೇ ಪರಲೋಕವಾಗಿದೆ. ಯಾರೆಲ್ಲ ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಕರ್ತನಾದ ಯೇಸು ತನ್ನ ಪಾಪಗಳಿಗಾಗಿ ಸತ್ತು, ಹೂಣಲ್ಪಟ್ಟು ಮೂರನೆಯ ದಿನದಲ್ಲಿ ಮರಣದಿಂದ ಎದ್ದು ಬಂದನೆಂಬುದಾಗಿ ಹೃದಯದಲ್ಲಿ ನಂಬಿ ಬಾಯಲ್ಲಿ ಅರಿಕೆ ಮಾಡಿ ಕರ್ತನಾದ ಯೇಸುಕ್ರಿಸ್ತನನ್ನು ತಮ್ಮ ಜೀವಿತದ ರಕ್ಷಕನೂ ಒಡೆಯನಾಗಿ ಅಂಗೀಕರಿಸುತ್ತಾರೋ ಮತ್ತು ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡು ತಮ್ಮ ಉಳಿದ ಜೀವಮಾನದಲ್ಲಿ ದೇವರ ಚಿತ್ತ ಪ್ರಕಾರ ಜೀವಿಸುತ್ತಾರೋ ಅವರು ತಮ್ಮ ಶರೀರ ಬಿಟ್ಟ ಕೂಡಲೇ ಪರಲೋಕಕ್ಕೆ ಹೋಗುತ್ತಾರೆಂದು, ನಿತ್ಯಜೀವ ಹೊಂದುತ್ತಾರೆಂದು, ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಹೊಂದುತ್ತಾರೆಂದು ಸತ್ಯವೇದ ಹೇಳುತ್ತದೆ. ಪರಲೋಕಕ್ಕೆ ಸೇರಬೇಕಾದರೆ ನಾವು ಏನು ಮಾಡಬೇಕೆಂದು ಹೇಳುವ ಸತ್ಯವೇದದ ಕೆಲವು ವಚನಗಳನ್ನು ಧ್ಯಾನಿಸೋಣ.

1) ದೇವರ ಕಡೆಗೆ ತಿರುಗಬೇಕು (ಮತ್ತಾ. 3:1–2, ಮಾರ್ಕ. 1:14–15).
2) ಯೇಸುಕ್ರಿಸ್ತನನ್ನು ನಂಬಿ ಅಂಗೀಕರಿಸಬೇಕು (ಯೋಹಾ. 1:12–13).
3) ಹೊಸದಾಗಿ ಹುಟ್ಟಬೇಕು (ಯೋಹಾ. 3:3, 3:5).
4) ಆತ್ಮದಲ್ಲಿ ಬಡವರಾಗಬೇಕು (ಮತ್ತಾ. 5:3).
5) ಶಾಸ್ತ್ರೀ ಫರಿಸಾಯರ ನೀತಿಗಿಂತ ನಮ್ಮ ನೀತಿ ಹೆಚ್ಚಿನದಾಗಬೇಕು (ಮತ್ತಾ. 5:20).
6) ತಂದೆಯ ಚಿತ್ತದಂತೆ ನಡೆಯಬೇಕು (ಮತ್ತಾ. 7:21–23).
7) ಚಿಕ್ಕ ಮಕ್ಕಳಂತೆ ಆಗಬೇಕು (ಮತ್ತಾ. 18:1–3).
8) ಪರಿಶುದ್ಧ ಜೀವನ (ಪ್ರಕ. 22:14).

ಕರ್ತನಾದ ಯೇಸುಕ್ರಿಸ್ತನು ನಿಮ್ಮೊಂದಿಗೆ ಇದ್ದು ಪರಲೋಕ ರಾಜ್ಯಕ್ಕೆ ಸೇರಿಸಲು ಸಹಾಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಆಮೆನ್, ಹಲ್ಲೆಲ್ಲೂಯ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) **ಒಂದನೇ ಅರ್ಥ** :– ಕ್ರಿಸ್ತನ ಸಭೆ ಅಂದರೆ ಒಂದು ಪ್ರತ್ಯೇಕ ಉದ್ದೇಶಕ್ಕಾಗಿ ದೇವರಿಂದ ಕರೆಯಲ್ಪಟ್ಟು ಬೇರ್ಪಡಿಸಿದವರ ಗುಂಪು ಎಂದು ಅರ್ಥ ಅಥವಾ ರಕ್ಷಣೆ ಹೊಂದಿದವರ ಗುಂಪು ಎಂದು ಕೂಡ ಅರ್ಥವಾಗುತ್ತದೆ. ಸಭೆ ಅಂದರೆ ಕಟ್ಟಡವಲ್ಲ, ಅದು ಜನರ ಸಮೂಹವಾಗಿದೆ. ಆಂಗ್ಲ ಭಾಷೆಯ ಚರ್ಚ್ ಎಂಬ ಪದದ ಮೂಲ ಅರ್ಥ ಜನ ಸಮೂಹ ಎಂದಾಗಿದೆ. ಸಭೆಯು ಕರ್ತನಾದ ಯೇಸುಕ್ರಿಸ್ತನಿಂದ ಪ್ರಾರಂಭವಾಯಿತು. ಆತನು ತನ್ನ ಶಿಷ್ಯರಿಗೆ ಬೋಧಿಸಿದ ಆಜ್ಞೆಗಳು ಮತ್ತು ಉಪದೇಶಗಳು ದಿವ್ಯ ಸಂದೇಶಗಳಾದವು. ಅವು ಮನುಷ್ಯನ ಮನಸ್ಸನ್ನು ಸಾಧಿಸಿ ಮನುಷ್ಯನನ್ನು ಪರಿವರ್ತನೆಗೊಳಿಸಿತು. ಹೀಗೆ ತಂದೆಯಾದ ದೇವದೂತನು ನಿಯೋಜಿಸಿದ ಸಭೆಯೆಂಬ ಯೋಜನೆಯನ್ನು ತನ್ನ ಪುತ್ರನಾದ ಯೇಸುಕ್ರಿಸ್ತನ ಮೂಲಕ ಸಿದ್ಧಿಗೆ ತಂದನು. ಅದನ್ನು ಯಾವುದೇ ಶರತ್ತುಗಳಿಲ್ಲದೆ ಕೇವಲ ಪ್ರೀತಿಯ ಅಸ್ತಿವಾರದ ಮೇಲೆ ಕಟ್ಟಿದನು. ಅಲ್ಲಿಂದ ಸಭೆ ಬೆಳೆಯುತ್ತಾ ಜಗತ್ತಿನಾದ್ಯಂತ ಹರಡುತ್ತಾ ಬಂತು. ಮೊದಲು ಸಣ್ಣ ಸಣ್ಣ ಗುಂಪುಗಳಾಗಿ ಆರಂಭವಾದ ಕ್ರಿಸ್ತನ ಸಭೆ ಕ್ರಮೇಣ ದೊಡ್ಡ ದೊಡ್ಡ ಜನ ಸಮೂಹಗಳಾದವು. ಸಭೆಯು ದೇವರಿಂದ ಮನುಷ್ಯನಿಗೆ ಸಿಕ್ಕಿದ ಅಪೂರ್ವ ಕೊಡುಗೆಯಾಗಿದೆ. ಚಿಕ್ಕದಾಗಿ ಆರಂಭವಾದ ಕ್ರಿಸ್ತನ ಸಭೆಯು ನಾಶವಾಗಲಿಲ್ಲ. ಸೈತಾನನು ಕ್ರಿಸ್ತನ ಜೀವವುಳ್ಳ ಸಭೆಯನ್ನು ಅನೇಕ ರಾಜರ ಮೂಲಕ, ವ್ಯಕ್ತಿಗಳ ಮೂಲಕ ನಾಶಮಾಡಲು ಪ್ರಯತ್ನ ಮಾಡಿದರೂ ಅವನಿಂದ ಸಭೆಯನ್ನು ನಾಶಮಾಡಲು ಸಾಧ್ಯವಾಗಲಿಲ್ಲ ಕಾರಣ ಅದಕ್ಕೆ ಭದ್ರವಾದ ಅಸ್ತಿವಾರವೂ ದಿವ್ಯವಾದ ಉಪದೇಶವೂ ಇತ್ತು. ಕಷ್ಟ, ದು:ಖ, ನೋವು, ವೇದನೆ, ಸಮಸ್ಯೆ, ಹೋರಾಟಗಳ ನಡುವೆ ದೇವರಿಂದ ದೊರೆತ ಉಪದೇಶಗಳು ಸಭೆಗೆ ದಾರಿ ದೀಪವಾಯಿತು. “ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವು ನನ್ನ ದಾರಿಗೆ ಬೆಳಕು ಆಗಿದೆ” (ಕೀರ್ತ. 119:105). ಅದೇ ಸಭೆಯ ಆಸ್ತಿಯಾಗಿದೆ ಆದರೆ ಮುಂದಿನ ಸಂತತಿ ಈ ಸಭೆಯ ಉಪದೇಶ ಎಂಬ ಆಸ್ತಿಯನ್ನು ಕಾಪಾಡಿಕೊಳ್ಳಲಿಲ್ಲ. ಕಾಲವು ಉರುಳಿದಂತೆ ಉಪದೇಶಗಳಲ್ಲಿ ವ್ಯತ್ಯಾಸಗಳು ಕಂಡು ಬಂದವು. ಅಲ್ಲಿಂದ ಸಭೆಯ ಶೋಷಣೆ ಆರಂಭವಾಯಿತು. ಯಾವ ಸಭೆಯು ದೇವರ ಉಪದೇಶಕ್ಕೆ ಪ್ರಧಾನ್ಯತೆ ನೀಡಿತೋ ಆ ಸಭೆಯು ಲೋಕದಲ್ಲಿ ದೃಢವಾಗಿ ನೆಲೆನಿಂತಿತು. ಅಂಥ ಸಭೆಗಳಲ್ಲಿ ದೈವೀಕ ಉಪದೇಶಗಳಿಗೆ ಇಂದಿಗೂ ಮಹತ್ವದ ಸ್ಥಾನವನ್ನು ಕೊಡಲಾಗಿದೆ.

ಕ್ರಿಸ್ತನ ದೇಹವೆಂಬ ಸಭೆಯು ಪಂಚಾಶತ್ತಮ ದಿನದಂದು ಆರಂಭಗೊಂಡಿತು. ಅದು ಕರ್ತನಾದ ಯೇಸುಕ್ರಿಸ್ತನ ಎರಡನೇ ಬರೋಣದಲ್ಲಿ ಕೊನೆಗೊಳ್ಳುತ್ತದೆ. ಸಭೆಯು ಯೇಸುಕ್ರಿಸ್ತನ ದೇಹವಾಗಿದೆ. ಯೇಸುಕ್ರಿಸ್ತನು ಅದರ ತಲೆಯಾಗಿದ್ದಾನೆ. “ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ” (ಎಫೆ. 1:21–23). ಕೆಲವರಿಗೆ ತಪ್ಪು ಕಲ್ಪನೆ ಏನೆಂದರೆ ಸಭೆ ಅಂದರೆ ಕಟ್ಟಡ ಎಂದು ಆದುದರಿಂದ ಕಟ್ಟಡಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ. ದೇವರ ವಾಕ್ಯ ಏನು ಹೇಳುತ್ತದೆ, “ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನು ಉಂಟುಮಾಡಿದ ದೇವರು ಭೂಮ್ಯಾಕಾಶಗಳ ಒಡೆಯನಾಗಿರುವುದರಿಂದ ಆತನು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ ವಾಸ ಮಾಡುವವನಲ್ಲ” (ಅ.ಕೃ. 17:24). “ಈ ಕಟ್ಟಡಗಳೇ ಯೆಹೋವನ ಆಲಯ, ಯೆಹೋವನ ಆಲಯ, ಯೆಹೋವನ ಆಲಯ ಎಂಬುವ ಸುಳ್ಳು ಮಾತುಗಳ ಮೇಲೆ ಭರವಸವಿಡಬೇಡಿರಿ” (ಯೆರೆ. 7:4). ಕ್ರೈಸ್ತ ಅಂಥ ಕರೆಸಿಕೊಂಡ ಕೂಡಲೆ ಕ್ರೈಸ್ತನಾಗುವುದಿಲ್ಲ, ಕ್ರೈಸ್ತ ಸಭೆ ಅಂಥ ಕರೆಸಿಕೊಂಡ ಕೂಡಲೆ ಕ್ರೈಸ್ತ ಸಭೆಯಾಗುವುದಿಲ್ಲ, ಕ್ರೈಸ್ತ ಅಂಥ ಕರೆಸಿಕೊಳ್ಳಬೇಕಾದರೆ ಕರ್ತನಾದ ಯೇಸುವಿಗೆ ಹುಟ್ಟಿದವನಾಗಿರಬೇಕು, ಕ್ರೈಸ್ತ ಸಭೆ ಎಂದು ಕರೆಸಿ ಕೊಳ್ಳಬೇಕಾದರೆ ಕ್ರಿಸ್ತನ ಉಪದೇಶಗಳು ಆ ಸಭೆಯಲ್ಲಿ ನೆಲೆಗೊಂಡಿರಬೇಕು.

ರೋಮ. 9:8 ರಲ್ಲಿ ಮಾತಿನ ಅರ್ಥವೇನಂದರೆ ಶರೀರ ಸಂಬಂಧವಾಗಿ ಹುಟ್ಟಿದವರೆಲ್ಲರೂ ದೇವರ ಮಕ್ಕಳಲ್ಲ, ನಾವೆಲ್ಲರೂ ಶರೀರ ಸಂಬಂಧವಾಗಿ ನಮ್ಮ ತಂದೆ ತಾಯಿಯವರಿಗೆ ಹುಟ್ಟಿದವರು ಹೌದಾದರೆ ದೇವರ ಮಕ್ಕಳು ಯಾರು?

ಯೋಹಾ. 1:12–13 ಯಾರಾರು (ಲೋಕದಲ್ಲಿ ಹುಟ್ಟಿದ ಯಾವುದೇ ಮನುಷ್ಯನಾಗಲಿ) ಆತನನ್ನು (ಯೇಸುಕ್ರಿಸ್ತನನ್ನು) ಅಂಗೀಕರಿಸಿದರೋ (ತನ್ನ ಜೀವಿತದ ಸ್ವಂತ ರಕ್ಷಕನು ಮತ್ತು ಒಡೆಯನು ಎಂಬುದಾಗಿ) ಅಂಗೀಕರಿಸಿದರೋ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ (ಯೇಸುಕ್ರಿಸ್ತನು ಪಾಪದ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡು ನನಗಾಗಿ ಸತ್ತನು, ನನಗಾಗಿ ಹೂಣಲ್ಪಟ್ಟನು, ನನಗಾಗಿ ಮೂರನೆ ದಿನದಲ್ಲಿ ಎದ್ದು ಬಂದನು ಎಂಬುದಾಗಿ) ಅವರಿಗೆ ದೇವರ ಮಕ್ಕಳಾಗುವ (ಕ್ರೈಸ್ತ ಕುಟುಂಬದಲ್ಲಿ ಹುಟ್ಟಿದವರಿಗೆ ಅಲ್ಲ) ಅಧಿಕಾರವನ್ನು ಕೊಟ್ಟನು. ಇವರು ರಕ್ತ ಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷ ಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ

ನನ್ನ ಶರಣನೇ ನನ್ನ ವಿಮೋಚಕನೇ, ನನ್ನ ಮಾತುಗಳೂ, ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ (ಕೀರ್ತ. 19:14).

ದೇವರಿಂದಲೇ ಹುಟ್ಟಿದವರು ಇವರೇ ದೇವರ ಮಕ್ಕಳು ಅಂಥ ದೇವರ ವಾಕ್ಯವು ಹೇಳುತ್ತದೆ.

**ಕ್ರೈಸ್ತನು ಯಾರು ?**

ಸತ್ಯವೇದದಲ್ಲಿ 4 ಕಡೆಗಳಲ್ಲಿ ಕ್ರೈಸ್ತ ಎಂಬ ಪದವನ್ನು ವಿವಿಧ ಸಂದರ್ಭಗಳಲ್ಲಿ ಬಳಸಲಾಗಿದೆ.

1) **“ಅವನನ್ನು ಕಂಡು ಅಂತಿಯೋಕ್ಯಕ್ಕೆ ಕರೆದುಕೊಂಡು ಬಂದನು. ಆ ಮೇಲೆ ಅವರು ಪೂರಾ ಒಂದು ವರ್ಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶ ಮಾಡಿದರು. ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಬಂತು” (ಅ.ಕೃ. 11:26).**

2) **ಅಲ್ಪ ಪ್ರಯುತ್ನದಿಂದ ನನ್ನನ್ನು ಕ್ರೈಸ್ತನಾಗುವದಕ್ಕೆ ಒಡಂಬಡಿಸುತ್ತೀಯಾ? (ಅ.ಕೃ. 26:28).**

3) **“ಆದರೆ ಕ್ರೈಸ್ತ ಸಹೋದರನೆನಿಸಿಕೊಂಡವನು ಜಾರನಾದರೂ ಲೋಭಿಯಾದರೂ ವಿಗ್ರಹಾರಾಧಕನಾದರೂ ಬೈಯುವವನಾದರೂ ಕುಡಿಕನಾದರೂ ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು ಎಂದು ಬರೆದಿದ್ದೆನು” (1 ಕೊರಿ. 5:11).**

4) **ಆದರೆ ಕ್ರೈಸ್ತನಾಗಿ ಭಾದೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ (1 ಪೇತ್ರ. 3:16).**

1) **ಅವನನ್ನು ಕಂಡು ಅಂತಿಯೋಕ್ಯಕ್ಕೆ ಕರೆದುಕೊಂಡು ಬಂದನು. ಆ ಮೇಲೆ ಅವರು ಪೂರಾ ಒಂದು ವರುಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶ ಮಾಡಿದರು. ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಬಂತು.** (ಅ.ಕೃ. 11:26). ಯೇಸುವಿನ ಶಿಷ್ಯರನ್ನು ಅನ್ಯಜನರು ಕ್ರೈಸ್ತರೆಂಬುದಾಗಿ ಕರೆಯುತ್ತಿದ್ದಾರೆ ಅದಕ್ಕೆ ಕಾರಣವೇನು? ಶಿಷ್ಯರ ಗುಣ ನಡತೆಗಳು ಯೇಸುವಿನ ಹಾಗೆ ಇದ್ದವು ಮಾತ್ರವಲ್ಲದೆ ಅನ್ಯಜನರು ಶಿಷ್ಯರಲ್ಲಿ ಯೇಸುಕ್ರಿಸ್ತನನ್ನು ಕಂಡರು. ಇಂದು ಅನ್ಯಜನರು ಕ್ರೈಸ್ತರಲ್ಲಿ ಯೇಸುಕ್ರಿಸ್ತನ ಗುಣ ಸ್ವಭಾವಗಳನ್ನು ಕಾಣಲು ಸಾಧ್ಯವೇ? ಇಂದು ಕ್ರೈಸ್ತರಲ್ಲೂ, ಕ್ರೈಸ್ತ ಸಭೆಗಳಲ್ಲೂ ಹೊಟ್ಟೆಕಿಚ್ಚು, ಜಗಳ, ಭಿನ್ನಮತ, ದ್ವೇಷ, ಅಹಂಕಾರ, ಹೊಡೆದಾಟಗಳನ್ನು ಅನೇಕ ಕಡೆ ಕಾಣುವುದಿಲ್ಲವೇ? ಸಭೆಗಳಲ್ಲಿ ಐಕ್ಯತೆ ಇಲ್ಲ, ಪ್ರೀತಿ ಇಲ್ಲ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ. ದೇವರ ವಾಕ್ಯ ಹೇಳುತ್ತದೆ, “ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವುದಕ್ಕೆ ಬದ್ಧನಾಗಿದ್ದಾನೆ” (1 ಯೋಹಾ. 2:6).

**ಹಾಗಾದರೆ ಯೇಸುಕ್ರಿಸ್ತನು ಹೇಗೆ ನಡೆದನು?**

1) ಕ್ರಿಸ್ತ ಯೇಸುವಿನಲ್ಲಿದ್ದಂತ ಮನಸ್ಸು ನಿಮ್ಮಲ್ಲಿಯೂ ಇರಲಿ (ಫಿಲಿ. 2:5).
2) ಕ್ಷಮಿಸುವ ಮನಸ್ಸು (ಲೂಕ. 23:34).
3) ಕನಿಕರದ ಮನಸ್ಸು (ಮತ್ತಾ. 14:14, 8:2–4).
4) ತಗ್ಗಿಸುವ ಮನಸ್ಸು (ಮತ್ತಾ. 3:13–17).
5) ಪ್ರಾರ್ಥಿಸುವ ಮನಸ್ಸು (ಮತ್ತಾ. 14:23).
6) ಪ್ರೀತಿಸುವ ಮನಸ್ಸು (ಯೋಹಾ. 13:1).
7) ಸೇವೆ ಮಾಡುವ ಮನಸ್ಸು (ಮತ್ತಾ. 13:4–5, 20:28).
8) ಸುವಾರ್ತೆ ಸಾರುವ ಮನಸ್ಸು (ಲೂಕ. 4:43).
9) ದೇವರ ಚಿತ್ತವನ್ನು ನೆರವೇರಿಸುವ ಮನಸ್ಸು (ಯೋಹಾ. 4:34, ಮತ್ತಾ. 26:39).
10) ಸಮಾಧಾನ ಕಳಕೊಂಡವರಿಗೆ ಸಮಾಧಾನ ಹೇಳುವ ಮನಸ್ಸು (ಯೋಹಾ. 20:18–22).
11) ಪಾಪದಲ್ಲಿ ಬಿದ್ದವರಿಗೆ ಜೀವಕೊಡುವ ಮನಸ್ಸು (ಯೋಹಾ. 8:1–12).
12) ತಂದೆಯನ್ನು ಮಹಿಮೆಪಡಿಸುವ ಮನಸ್ಸು (ಯೋಹಾ. 12:28, 17:4).
13) ಲೋಕವನ್ನು ಅದರ ಅಡಂಬರವನ್ನು ತ್ಯಜಿಸುವ ಮನಸ್ಸು (ಯೋಹಾ. 6:15).

ಕ್ರಿಸ್ತನಲ್ಲಿ ಪ್ರಿಯರೇ, ಇಂದು ಲೋಕವು ನಮ್ಮನ್ನು ನೋಡುವಾಗ ನಮ್ಮಲ್ಲಿ ಕ್ರಿಸ್ತನನ್ನು ಕ್ರಿಸ್ತನ ಗುಣಗಳನ್ನು ಕಾಣುತ್ತಿದೆಯೇ? ಕ್ರೈಸ್ತ ಅಂದರೆ ಅರ್ಥ ಕ್ರಿಸ್ತನು ನನ್ನೊಳಗೆ, ನಮ್ಮೊಳಗೆ. ಕರ್ತನಾದ ಯೇಸುಕ್ರಿಸ್ತನು ಇದ್ದರೆ ಕ್ರಿಸ್ತನ ಗುಣಸ್ವಭಾವಗಳು ನಿಮ್ಮಿಂದ ಹೊರ ಬರುತ್ತವೆ. ಕ್ರಿಸ್ತನು ನಮ್ಮೊಳಗೆ ಇರದಿದ್ದರೆ ಶಾರೀರಿಕವಾದ ಇಚ್ಛೆ ಮತ್ತು ಸ್ವಭಾವಗಳು ಹೊರ ಬರುತ್ತವೆ.

2) ಅಲ್ಪ ಪ್ರಯುತ್ನದಿಂದ ನನ್ನನ್ನು ಕ್ರೈಸ್ತನಾಗುವುದಕ್ಕೆ ಒಡಂಬಡಿಸುತ್ತೀಯಾ? (ಅ.ಕೃ. 26:28):– ಕ್ರೈಸ್ತತ್ವ ಎಂಬುವುದು ಸತ್ಯವೇದದ ಪ್ರಕಾರ ಒಂದು ಮತ, ಜಾತಿ, ಧರ್ಮವಲ್ಲ, ಕ್ರೈಸ್ತತ್ವ ಅಂದರೆ ಅದು ಒಂದು ಪರಲೋಕದ ಮಾರ್ಗವಾಗಿದೆ ಮಾತ್ರವಲ್ಲದೆ ಕ್ರೈಸ್ತತ್ವವು ಹೃದಯದ ಪರಿವರ್ತನೆ (ಮಾನಸಾಂತರ) ಮತ್ತು ಕ್ರಿಸ್ತನಲ್ಲಿ, ಆತನ ಉಪದೇಶದಲ್ಲಿ ನಂಬಿಕೆ ಇಟ್ಟು ನಿರೀಕ್ಷೆಯೊಂದಿಗೆ ಜೀವಿಸುವಂತಹ ಒಂದು ಜೀವನವಾಗಿದೆ. ಕ್ರೈಸ್ತತ್ವ ಅಂದರೆ ಜೀವಿತದಲ್ಲಿ ಕ್ರಿಸ್ತನನ್ನು ಪ್ರಕಟಿಸುವ ಜೀವಿತವಾಗಿದೆ. ಕ್ರೈಸ್ತತ್ವ ಅಂದರೆ ಕತ್ತಲೆಯಿಂದ ಬಿಡುಗಡೆ ಹೊಂದಿ ಬೆಳಕಿನಡೆಗೆ ಸಾಗುವಂತಹ ಜೀವಿತವಾಗಿದೆ. ಕ್ರೈಸ್ತತ್ವ ಅಂದರೆ ಮರಣದಿಂದ ಬಿಡುಗಡೆ ಹೊಂದಿ ನಿತ್ಯ ಜೀವದ ಕಡೆಗೆ ಸಾಗುವ ಜೀವನವಾಗಿದೆ. ಕ್ರೈಸ್ತತ್ವ ಅಂದರೆ ಅನುದಿನವೂ ಕ್ರಿಸ್ತನ

ಮೂಢರೇ, ಜಾಣತನವನ್ನು ಕಲಿತುಕೊಳ್ಳಿರಿ, ಜ್ಞಾನಹೀನರೇ,
ಬುದ್ಧಿಯನ್ನು ಗ್ರಹಿಸಿರಿ (ಜ್ಞಾನೋ. ೮:೫).

ಅನ್ಯೋನ್ಯತೆಯಲ್ಲಿ ಜೀವಿಸುವ ಜೀವನವಾಗಿದೆ. ಕ್ರೈಸ್ತತ್ವದಲ್ಲಿ ಮನುಷ್ಯನಿಗೆ ನಿರೀಕ್ಷೆ ಇದೆ, ಕ್ರೈಸ್ತತ್ವದಲ್ಲಿ ಮನುಷ್ಯನಿಗೆ ನಿತ್ಯಜೀವದ ನಿಶ್ಚಯ ಇದೆ.

ಅಪೋಸ್ತಲನಾದ ಪೌಲನು ಕೆಲವು ಪ್ರಶ್ನೆಗಳಿಗೆ ಉತ್ತರಿಸಿದ ಅಗ್ರಿಪ್ಪರಾಜನ ಮೇಲಿನ ಪ್ರಶ್ನೆಯನ್ನು ಕೇಳುತ್ತಾನೆ, ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವುದಕ್ಕೆ ಒಡಂಬಡಿಸುತ್ತೀಯಾ? ಇಂದು ಲೋಕದಲ್ಲಿ ಅನೇಕರಿಗೆ ಕ್ರೈಸ್ತತ್ವದ ಕುರಿತು, ಸುವಾರ್ತೆಯ ಕುರಿತು ತಪ್ಪಾಭಿಪ್ರಾಯವಿದೆ. ಇದೇ ರೀತಿ ಅಗ್ರಿಪ್ಪರಾಜನಿಗೂ, ಫೆಸ್ತನ್‌ನಿಗೂ ತಪ್ಪಾಭಿಪ್ರಾಯವಿತ್ತು. ಯಾವುದೇ ಒಂದು ಜಾತಿಯಲ್ಲಿರುವ ಒಬ್ಬ ಮನುಷ್ಯನು ಕ್ರೈಸ್ತ ಧರ್ಮವನ್ನು ಸ್ವೀಕರಿಸುವುದರಿಂದ ಏನು ಪ್ರಯೋಜವಿಲ್ಲ. ಅಲ್ಲಿ ಇದ್ದದ್ದೇ ಇಲ್ಲಿ ಇರುವುದು. ಇಲ್ಲಿ ಇದ್ದದ್ದೇ ಅಲ್ಲಿ ಇರುವದು. ನಾನು ಆಗಲೇ ಹೇಳಿದ ಪ್ರಕಾರ ಸತ್ಯವೇದದ ಪ್ರಕಾರ ಕ್ರೈಸ್ತತ್ವವು ಒಂದು ಜಾತಿ, ಧರ್ಮವಲ್ಲ, ಸತ್ಯವೇದದ ಪ್ರಕಾರ ಸ್ವೀಕರಿಸಬೇಕಾದದ್ದು ಧರ್ಮವಲ್ಲ, ಕ್ರೈಸ್ತ ಧರ್ಮವು ಪಾಪ ವಿಮೋಚನೆ, ಪಾಪದ ಶಿಕ್ಷೆಯಿಂದ ಬಿಡುಗಡೆ ಕೊಡುತ್ತದೆ ಮತ್ತು ನಿತ್ಯಜೀವ ಕೊಡುತ್ತದೆ ಎಂದು ಸತ್ಯವೇದದಲ್ಲಿ ಎಲ್ಲಿಯೂ ಬರೆಯಲಿಲ್ಲ. ಪಾಪದಿಂದಲೂ, ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆಕೊಟ್ಟು ನಿತ್ಯಜೀವವನ್ನು ಕೊಡುವಾತನು ಕರ್ತನಾದ ಯೇಸುಕ್ರಿಸ್ತನಾಗಿದ್ದಾನೆ. "ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು" (ಯೋಹಾ. 10:28). "ಕ್ರಿಸ್ತನು ತಾನು ಕೊಡುತ್ತೇನೆಂದು ನಮಗೆ ವಾಗ್ದಾನ ಮಾಡಿದ್ದು ನಿತ್ಯಜೀವವು" (1 ಯೋಹಾ. 2:25).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಡಿಜಿಎಮ್ ಬೇತೇಲ್ ಅಂಕಣ

- **ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಟ್ಟ 9ನೇ ಕೆರೀತ್ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು. ಈ ಕೂಟದಲ್ಲಿ ಅನೇಕರು ಭಾಗವಹಿಸಿ ಕರ್ತನಿಂದ ಬಿಡುಗಡೆಯನ್ನು, ಸ್ವಸ್ಥತೆಯನ್ನು ಹೊಂದಿಕೊಂಡರು.**
- **ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಸಹೋ॥ ಮಹೇಶ್ ಹಾಗೂ ಸುದರ್ಶನ್ ರಾವ್‌ರವರು ತಮ್ಮ ಕುಟುಂಬಕ್ಕೆ ಮರಳಿದ್ದಾರೆ.**
- **ಏಪ್ರಿಲ್ 11.04.15 ರಿಂದ 20.04.15ರವರೆಗೆ 10ನೇ ಕೆರೀತ್ ಕೂಟವು ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಡುವದು.**

## ಪ್ರಾರ್ಥನಾ ಮನವಿಗಳು

- **ನಮ್ಮ ಭಾರತ ದೇಶದಲ್ಲಿರುವ ಎಲ್ಲಾ ಜನರಿಗಾಗಿ ರಾಷ್ಟ್ರಪತಿಗಾಗಿ, ಪ್ರಧಾನಮಂತ್ರಿಗಾಗಿ, ಮುಖ್ಯಮಂತ್ರಿಗಳಿಗಾಗಿ, ಸಚಿವರುಗಳಿಗಾಗಿ, ಅಧಿಕಾರಿಗಳಿಗಾಗಿ, ನ್ಯಾಯಾಧಿಪತಿಗಳಿಗಾಗಿ ಕರ್ತನ ಬಳಿ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ಎಡಗೈಗೂ ಬಲಗೈಗೂ ವ್ಯತ್ಯಾಸ ತಿಳಿಯದ ಕೋಟ್ಯಾಂತರ ಜನರ ರಕ್ಷಣೆಗಾಗಿ ಕರ್ತನಲ್ಲಿ ಪ್ರಾರ್ಥಿಸಿರಿ.**
- **ದೇವರು ವಾತವರಣವನ್ನು ತನ್ನ ನಿಯಂತ್ರಣದಲ್ಲಿಟ್ಟು ನಡೆಸುವಂತೆ ಯಾವುದೇ ಅತಿವೃಷ್ಟಿ ಅನಾವೃಷ್ಟಿಗಳು ಆಗದಂತೆ ಪ್ರಾರ್ಥಿಸಿರಿ.**
- **ಬೇಸಿಗೆ ಕಾಲದಲ್ಲಿ ನೀರಿನ ಹಾಗೂ ವಿದ್ಯುತ್‌ಚ್ಛಕ್ತಿಯ ಕೊರತೆಗಳು ಉಂಟಾಗದಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿರುವ ಬಡತನ, ಬರಗಾಲಗಳನ್ನು ಕರ್ತನು ನೀಗಿಸಿ ಸಮೃದ್ಧಿಯನ್ನು ನೀಡುವಂತೆ ಪ್ರಾರ್ಥಿಸಿರಿ.**
- **ದೇವರ ಮಕ್ಕಳನ್ನು ಹಿಂಸೆಪಡಿಸುತ್ತಿರುವ ಪ್ರತಿಯೊಂದು ವ್ಯಕ್ತಿಗಳನ್ನು ಕರ್ತನು ಮುಟ್ಟುವಂತೆ ಪ್ರಾರ್ಥಿಸಿರಿ.**
- **ಪ್ರತಿಯೊಂದು ವಿಶ್ವಾಸಿಗಳು ರಕ್ಷಣೆಯಲ್ಲಿ ಸ್ಥಿರವಾಗಿ ನಿಲ್ಲಲು ಕರ್ತನು ಸಹಾಯ ಮಾಡುವಂತೆ ಪ್ರಾರ್ಥಿಸಿರಿ.**
- **ಎಸ್.ಎಸ್.ಎಲ್.ಸಿ ಹಾಗೂ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಪ್ರತಿಯೊಂದು ಮಕ್ಕಳು ಉತ್ತಮ ಅಂಕಗಳನ್ನು ಗಳಿಸಿ ತೇರ್ಗಡೆಯಾಗುವಂತೆ ಹಾಗೂ ಯಾವುದೇ ಆತ್ಮಹತ್ಯೆಗಳು ನಡೆಯದ ಹಾಗೆ ಪ್ರಾರ್ಥಿಸಿರಿ.**

ನಾನು ಭೂಲೋಕದಲ್ಲಿ ಪ್ರವಾಸಿಯಾಗಿದ್ದೇನೆ; ನಿನ್ನ ಆಜ್ಞೆಗಳನ್ನು ನನಗೆ ಮರೆಮಾಡಬೇಡ (ಕೀರ್ತ. 119:19)

# ದೇವರು ನಮಗೆ ನೀಡಿದ ಕೃಪೆಗಾಗಿ ಪ್ರತಿ ನಿತ್ಯವೂ ಸ್ತೋತ್ರ ಸಲ್ಲಿಸೋಣ

ನನ್ನ ಆತ್ಮೀಯ ಓದುಗರೇ,

ಕಳೆದ ಸಂಚಿಕೆಯಲ್ಲಿ ಈ ಹೊಸ ವರ್ಷ 2015 ರಲ್ಲಿ ನಾವು ಯಾವ ರೀತಿ ನಡೆಯಬೇಕು ಎಂಬ ಕೆಲವು ಸಲಹೆಗಳನ್ನು ತಿಳಿಸಿದ್ದೆ. ಇಂದಿನ ಪ್ರಪಂಚದಲ್ಲಿ ಹೆಚ್ಚಿನ ಕ್ರೈಸ್ತರು ಕೇವಲ ಸಾಂಪ್ರದಾಯಕ ರೂಢಿಗಳು ಎಂದು ತಿಳಿದು ಯಾವುದೇ ಮಹತ್ವ ನೀಡದೇ ಕೇವಲ ತೋರಿಕೆಯ ಫರಿಸಾಯರಾಗಿ ಮುನ್ನಡೆಯುತ್ತಾರೆ. ಇಲ್ಲಿ ನಾವೆಲ್ಲರೂ ಮುಖ್ಯವಾಗಿ ತಿಳಿಯಬೇಕಾದದ್ದು ಏನೆಂದರೆ, ನಮ್ಮ ನಿಜ ಕ್ರೈಸ್ತ ಜೀವಿತದಲ್ಲಿ ನಾವು ಪ್ರತಿ ದಿನವೂ ದೇವರಿಗೆ ಸ್ತೋತ್ರ, ಪ್ರಾರ್ಥನೆ ಮತ್ತು ಉಪಕಾರಗಳನ್ನು ಎಂದಿಗೂ ಮರೆಯದೇ ಸಲ್ಲಿಸಲೇ ಬೇಕಾಗಿದೆ. ನಮ್ಮ ತಂದೆಯಾದ ಪರಲೋಕ ದೇವರು ನಿತ್ಯವೂ ನಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ ಮತ್ತು ಕಾರ್ಯಗಳನ್ನು ಗಮನಿಸುತ್ತಾನೆ. ನಮ್ಮ ತಂದೆ ದೇವರು ಯೇಸು ಸ್ವಾಮಿಯ ಮೂಲಕ ನಮಗೆ ವಿಶೇಷ ಸಂಪರ್ಕ ದಯಪಾಲಿಸಿದ ಮೇಲೆ ಈ ಅಮೂಲ್ಯ ಅವಕಾಶವನ್ನು ನಾವು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇವೆ? ಪರಿಶುದ್ಧ ಸತ್ಯವೇದದಲ್ಲಿ ಯೇಸು ಕ್ರಿಸ್ತನ ಜೀವನ ದಿನದಲ್ಲಿ ಇಸ್ರಾಯೇಲ ಜನಾಂಗದ ಮುಖಂಡರಾದ ಫರಿಸಾಯರು ಹಾಗೂ ಶಾಸ್ತ್ರಿಗಳು ಕೇವಲ ತೋರಿಕೆಯ ಭಕ್ತರಂತೆ ತಮ್ಮ ಹೃದಯದಲ್ಲಿ ಕಪಟವಿಟ್ಟು ಕೇವಲ ಸಂಪ್ರದಾಯ ಆಚರಣೆಗಳ ಮೂಲಕ ಜನರನ್ನು ಶೋಷಣೆ ಮಾಡುವುದನ್ನು ಯೇಸು ಕ್ರಿಸ್ತನು ಬಲವಾಗಿ ಖಂಡಿಸುತ್ತಾನೆ. ಇದೇ ರೀತಿ ನಮ್ಮ ಜೀವಿತ ಯಾವ ರೀತಿಯಲ್ಲಿ ಮುಂದುವರಿಯಬೇಕು? ಉದಾಹರಣೆಗಾಗಿ ಒಂದು ಚಿಕ್ಕ ದೃಷ್ಟಾಂತ ಇಲ್ಲಿ ನಾನು ಉಲ್ಲೇಖಿಸಲು ಬಯಸುತ್ತೇನೆ. ಒಬ್ಬ ಖ್ಯಾತ ಚಿತ್ರ ರಚಕನಿಗೆ ಅವರ ಒಬ್ಬ ಆತ್ಮೀಯ ಸ್ನೇಹಿತ ಬಂದು ಪ್ರಶ್ನೆಯನ್ನು ಹಾಕಿದ! ಅದೇನೆಂದರೆ ನೀವು ಇಷ್ಟರ ತನಕ ರಚಿಸಿದ ಚಿತ್ರಗಳಲ್ಲಿ ಉತ್ತಮ ಚಿತ್ರ ಯಾವುದು ಎಂದು ಕೇಳಿದಾಗ ಆತನು ಅವನಿಗೆ ಮುಗುಳುನಗುತ್ತಾ ಹೇಳಿದ ಉತ್ತರವೇನೆಂದರೆ ನಾನು ಇವತ್ತು ರಚಿಸುವ ಚಿತ್ರವೇ ಶ್ರೇಷ್ಠ ಚಿತ್ರ. ಇಲ್ಲಿ ನಾವು ಸ್ಪಷ್ಟವಾಗಿ ತಿಳಿಯಬೇಕಾದದ್ದು ಏನೆಂದರೆ ದೇವರು ನಮಗೆ ಅನುಗ್ರಹಿಸಿದ ಪ್ರತಿ ದಿನಗಳು ಬಹು ಅಮೂಲ್ಯವಾದದ್ದು ಎಂದು ನಾವು ಅರ್ಥೈಸಿಕೊಳ್ಳಲೇ ಬೇಕಾಗಿದೆ.

ಇದಕ್ಕೆ ಪೂರಕವಾಗಿ ನಾವು ಪರಿಶುದ್ಧ ಸತ್ಯವೇದದಲ್ಲಿ ನೋಡುವಾಗ ದೇವರು ಮೀಕನಿಗೆ ದಯಪಾಲಿಸಿದ ಪ್ರವಚನಗಳನ್ನು ತನ್ನ 3ನೇ ಅಧ್ಯಾಯದ 8ನೇ ವಚನದಿಂದ 12ನೇ ವಚನದಲ್ಲಿ ಆಗಿನ ಕಾಲದಲ್ಲಿ ಇಸ್ರಾಯೇಲ್ ಜನಾಂಗವು ತಮ್ಮ ದೈನಂದಿನ ಜೀವನದಲ್ಲಿ ಚಿಂತನೆಗೆ ವಿರುದ್ಧವಾಗಿ ಮಾಡುವ ಅನ್ಯಾಯಗಳನ್ನು ಬಲವಾಗಿ ಖಂಡಿಸುತ್ತಾನೆ. ಈತನು ತನ್ನ ಸಮಕಾಲೀನ ಪ್ರವಾದಿಯಾದ ಆಮೋಸನಿಗೆ ದೇವರು ಒದಗಿಸಿದ ದೈವೀಕ ಪ್ರವಚನದಿಂದ ಹೆಚ್ಚು ಪ್ರೇರಿತಗೊಂಡು ಯಾವ ಅಂಜಿಕೆಯಿಲ್ಲದೆ ಬಲವಾಗಿ ಇಸ್ರಾಯೇಲರ ನಡವಳಿಕೆಗಳನ್ನು ಖಂಡಿಸುವುದನ್ನು ನಾವು ತಿಳಿಯುತ್ತೇವೆ. ಪ್ರವಾದಿಯಾದ ಮೀಕನು ಕ್ರಿಸ್ತ ಪೂರ್ವ. 8ನೇ ಶತಮಾನದಲ್ಲಿ ಯೆರುಸಲೇಮ್ ನಗರದ ಹತ್ತಿರ ಮರೇಶ್ ಹಳ್ಳಿಯಲ್ಲಿ ಜೀವನ ಸಾಗಿಸುತ್ತಿದ್ದನು. ಈ ಸಂದರ್ಭದಲ್ಲಿ ಅಶೂರ್ಯ ದೇಶದ ಜನರು ತಮ್ಮ ಪ್ರಭುತ್ವವನ್ನು ಯೆಹೂದ್ಯ ಜನಾಂಗದ ಮೇಲೆ ಸ್ಥಾಪಿಸಿದರು. ಇದಕ್ಕೆ ಮುಖ್ಯ ಬಲವಾದ ಕಾರಣ ದೇವರ ಕೋಪ ಯೆಹೂದ್ಯ ಜನಾಂಗದ ಕೆಟ್ಟ ಆಚರಣೆಗಳಿಂದ ರೋಸಿ ಹೋಗಿತ್ತು. ಇದರಿಂದ ನಾವು ವಿಶೇಷವಾಗಿ ತಿಳಿಯಬೇಕೆಂದರೆ ನಮ್ಮ ದಿನನಿತ್ಯದ ಜೀವನ ಮತ್ತು ಆತನು ನಮಗೆ ಅನುಗ್ರಹಿಸಿದ ಕೆಲಸಗಳನ್ನು ನಿಭಾಯಿಸುವ ಹಾಗೆ ದೇವರ ಚಿತ್ತಕ್ಕೆ ಒಳಪಟ್ಟರೆ ನಮ್ಮ ಜೀವನದಲ್ಲಿ ಆಶೀರ್ವಾದ ಲಭಿಸುವುದು. ಇಲ್ಲಿ ನಮ್ಮನ್ನು ಆಳವಾಗಿ ಪರೀಕ್ಷಿಸಿಕೊಳ್ಳುವುದು ಬಹು ಮುಖ್ಯವಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ನಮ್ಮ ಜನರ ಲೌಕಿಕ ನಡೆಗಳು ದೇವರ ಪ್ರೀತಿ ಮತ್ತು ನಂಬಿಕೆಗಳು ಕಡಿಮೆಯಾಗಿ ನಮ್ಮ ಜೀವನದಲ್ಲಿ ಅಸಮಾಧಾನ ಮತ್ತು ನೆಮ್ಮದಿ ಮಾಯವಾಗುತ್ತಿದೆಯೋ? ದೇವರು ಅನುಗ್ರಹಿಸಿದ ಪರಿಶುದ್ಧ ಸತ್ಯವೇದವು ನಮ್ಮ ಜೀವನಕ್ಕೆ ಬೆಳಕು ಮತ್ತು ಮಾರ್ಗದರ್ಶನ ನೀಡುವ ವಿಶೇಷ ಗುರಾಣಿಯಾಗಿದೆ ಎಂಬುದನ್ನು ನಾವು ಮರೆಯಬಾರದು. ಈ ಗ್ರಂಥವು ಪ್ರವಾದಿ ಮೋಶೆಯ ಪುಸ್ತಕದಿಂದ ನಂತರ ವಿವಿಧ ಪ್ರವಾದಿಗಳು, ರಾಜರು ನಂತರ ಹೊಸ ಒಡಂಬಡಿಕೆಯಲ್ಲಿ ಯೇಸುವಿನ ಮೂಲಕ ದೇವರು ನಮಗೆ ಪರಿಪೂರ್ಣವಾದ ಸಹಾಯಕನಾದ ಪವಿತ್ರಾತ್ಮನನ್ನು ದಯಪಾಲಿಸಲಿದ್ದಾನೆ. ಇಂದು ದೇವರ ನಡೆಸುವಿಕೆಗೆ ಪ್ರತೀ ದಿನವೂ ಆತನಲ್ಲಿ ಪ್ರಾರ್ಥನೆಯ ಮೂಲಕ ನಾವು ಮಾತನಾಡಲು ಆತನು ಆಶಿಸುತ್ತಾನೆ.

ಪ್ರಿಯರೇ, ನಾನು ಇಲ್ಲಿ ನಿಮ್ಮೆಲ್ಲರಿಗೆ ಬಹು ಸಂಕ್ಷಿಪ್ತವಾಗಿ ತಿಳಿಯಪಡಿಸಿದ್ದೇನೆ. ಏಕಂದರೆ ನಮ್ಮ ನಿಜ ಕ್ರೈಸ್ತ ಜೀವನ ಕೇವಲ ಹಬ್ಬ ಮತ್ತು ಶ್ರಮದಾನಗಳಿಗೆ ನೀಡುವ ಪ್ರಾಮುಖ್ಯತೆಗಿಂತಲೂ ನಾವು ಪ್ರತಿ ದಿನವೂ ದೇವರನ್ನು ಪ್ರೀತಿಸಿ

ನಿನ್ನ ವಾಗ್ದಾನವನ್ನು ನಿನ್ನ ಸೇವಕನಿಗೋಸ್ಕರ ನೆನಪುಮಾಡಿಕೋ;
ನನ್ನಲ್ಲಿ ನಿರೀಕ್ಷೆಯನ್ನು ಹುಟ್ಟಿಸಿದ್ದೀಯಲ್ಲಾ! (ಕೀರ್ತ. 119:49).

ಆತನ ಚಿತ್ತಕ್ಕೆ ವಿಧೇಯರಾಗಬೇಕಾಗಿದೆ. ಈ ಮೂಲಕ ನಾವು ಉತ್ತಮ ಫಲಗಳ ಕೊಡುಗೆ ನೀಡಬೇಕಾಗಿದೆ.

ಇನ್ನು ಕಡೆಯದಾಗಿ ನಮ್ಮ ಪರಲೋಕದ ತಂದೆ ದೇವರು ಅನುದಿನವು ನಮ್ಮನ್ನು ಪ್ರೀತಿಸಿ ಕಾಯುವುದಕ್ಕೆ ನಾವು ಅಂತರಾಳದಿಂದ ಸ್ತೋತ್ರ ಸಲ್ಲಿಸಬೇಕು ನಮ್ಮಿಂದ ಸಮಾಜದಲ್ಲಿ ಹೀನ ಸ್ಥಿತಿಯಲ್ಲಿರುವ ಸಹೋದರ/ಸಹೋದರಿಯರಿಗೆ ನಮ್ಮ ಕೈಲಾದ ಸಹಾಯ ಹಸ್ತವನ್ನು ಸಲ್ಲಿಸೋಣ. ದೇವರ 2ನೇ ನ್ಯಾಯ ತೀರ್ಪಿನ ದಿನದಲ್ಲಿ ನಾವು ದೋಷವಿಲ್ಲದೇ ನಿರ್ಮಲ ಚಿತ್ತರಾಗಿ ಎದುರುಗೊಳ್ಳಲು ಬಲವಾಗಿ ಪ್ರಯತ್ನಿಸೋಣ. ನಮ್ಮ ಅನುದಿನದ ಜೀವನದಲ್ಲಿ ಆತನ ಚಿತ್ತಕ್ಕೆ ವಿಧೇಯರಾಗಿ ಮುನ್ನಡೆದು ನಿತ್ಯವೂ ಆತನು ನಮ್ಮನ್ನು ಜಯದ ದಾರಿಯಲ್ಲಿ ಮುನ್ನಡೆಸಲು ಪ್ರಾರ್ಥಿಸೋಣ. ನಮ್ಮ ಸೃಷ್ಟಿಕರ್ತನಾದ ತಂದೆಯಾದ ದೇವರು ನಮ್ಮನ್ನು ನಿತ್ಯವೂ ಬಲಪಡಿಸಲಿ, ಮುನ್ನಡೆಸಲಿ.

ವಂದನೆಗಳು.

**ಜೇಮ್ಸ್ ಅಂಬ್ಲರ್, ಮಲ್ಪೆ.**

# ಮಕ್ಕಳ ಬುದ್ಧಿವಂತಿಕೆಯ ಕಥೆಗಳು : **ತಕ್ಕ ಶಾಸ್ತಿ**

ಒಂದು ಊರಿನಲ್ಲಿ ಒಬ್ಬ ಧನಿಕನಿದ್ದ. ಯಾರ ಮೇಲೂ ದಯೆ, ಕನಿಕರ ಅವನಿಗಿರಲಿಲ್ಲ. ತನ್ನ ಸಂಪತ್ತು ಹೆಚ್ಚು ಮಾಡಿಕೊಳ್ಳಲೆಂದು ಅಮಾಯಕರಿಗೆ ಮೋಸ ಮಾಡುವುದೆಂದರೆ ಅವನಿಗೆ ತುಂಬ ಪ್ರೀತಿ. ಅವನ ಮನೆಯಲ್ಲಿ ಯಾರೂ ಕೆಲಸಕ್ಕೆ ನಿಲ್ಲುತ್ತಿರಲಿಲ್ಲ. ಸ್ವಲ್ಪ ಸಮಯ ಕೆಲಸ ಮಾಡಿಸಿ, ಏನಾದರೊಂದು ಕಾರಣವೊಡ್ಡಿ ಅವರಿಗೆ ಸಂಬಳ ಕೊಡದೆ ಅಟ್ಟುತ್ತಿದ.

ಆ ಊರಿನಲ್ಲಿ ಬಸವನೆಂಬ ಒಬ್ಬ ತರುಣನೊಬ್ಬನಿದ್ದ. ಅವನಿಗೆ ಎಲ್ಲೂ ಕೆಲಸ ಸಿಗಲಿಲ್ಲ. ಧನಿಕನ ಬಳಿಗೆ ಕೆಲಸ ಕೇಳಿಕೊಂಡು ಬಂದ. ನಾನು ಹೇಳಿದ ಕೆಲಸವನ್ನು ಮಾಡಬೇಕು. ನೀನು ಕೇಳಿದ್ದನ್ನು ಕೊಡುತ್ತೇನೆ. ಆಗುವುದಿಲ್ಲ ಅಂತ ನೀನಾಗಿ ಕೆಲಸ ಬಿಟ್ಟು ಹೋದರೆ ನಿನ್ನ ಮೂಗು ಕೊಡಬೇಕು. ನಾನಾಗಿ ಹೋಗು ಎಂದರೆ ನನ್ನ ಮೂಗು ನಿನಗೆ ಎಂದು ಷರತ್ತೊಡ್ಡಿದ ಧನಿಕ.

ಇವನೊಬ್ಬ ಮೋಸಗಾರ ಎನ್ನುವುದು ತರುಣನಿಗೆ ಹೊಳೆಯಿತು. ಆದರೆ ಆತನ ಜಾಣ. ಈ ಷರತ್ತಿಗೆ ಒಪ್ಪಿಕೊಂಡು ಕೆಲಸಕ್ಕೆ ಸೇರಿದ. ಕೆಲವು ದಿನ ಚೆನ್ನಾಗಿ ದುಡಿದ. ಇನ್ನೂ ಅವನು ಊರಿಗೆ ಹೊರಡುತ್ತಾನೆ, ಆಗ ಇವರೆಗಿನ ಸಂಬಳ ಕೇಳುತ್ತಾನೆನ್ನುವುದು ಧನಿಕನಿಗೆ ಗೊತ್ತಾಯಿತು. ಹೇಗಾದರೊಂದು ಹಂಚಿಕೆ ಹೂಡಿ ಅವನನ್ನು ಓಡಿಸಲು ನಿರ್ಧರಿಸಿದ.

ಬಳಿಕ ತರುಣನನ್ನು ಕರೆದು ಒಂದು ಮರವನ್ನು ತೋರಿಸಿದ. ಈ ಮರದ ತುದಿಯಲ್ಲಿ ಎಳೆತೊಪ್ಪಲುಗಳಿವೆ. ನಮ್ಮ ಹಸುವನ್ನು ಹೊಡೆದುಕೊಂಡು ಹೋಗಿ ಅವನ್ನೆಲ್ಲಾ ಮೇಯಿಸು ಎಂದ. ಸರಿ ಧಣಿಗಳೇ ಎಂದು ತರುಣ ಹಗ್ಗದಲ್ಲಿ ಹಸುವನ್ನು ಅಲ್ಲಿಗೆ ಒಯ್ದ ಸ್ವಲ್ಪ ಹೊತ್ತಿನಲ್ಲಿ ಧನಿಕ ಮರದ ಬಳಿಗೆ ಹೋದಾಗ ತರುಣ ಮರದ ಕೊಂಬೆಯಲ್ಲಿ ನಿಂತು ಬಾ. ಮೇಲಕ್ಕೆ ಬಾ ಎನ್ನುತ್ತ ಹಸುವಿನ ಹಗ್ಗ ಹಿಡಿದು ಮೇಲೆಳೆಯುತ್ತಾ ಇದ್ದ. ಧನಿಕ ಮೇಲಕ್ಕೆಳೆದು ಹಸುವನ್ನು ಕೊಲ್ಲುತ್ತೀಯೋ ಹೇಗೆ? ಎಂದು ಕೂಗಿಕೊಂಡ.

ಮತ್ತೇನು ಮಾಡಲಿ, ಮರದ ತೊಪ್ಪಲುಗಳನ್ನು ಹಸುವಿಗೆ ಮೇಯಿಸಬೇಕೆಂದಿರಿ. ಅದು ಮರದ ತುದಿಗೆ ಬಾರದೆ ಹೇಗೆ ಮೇಯಿಸೋದು? ಎಂದ ತರುಣ.

ನೀನೊಬ್ಬ ಹೆಡ್ಡ. ಬಾ ಕೆಳಗೆ. ಅದನ್ನು ಬಿಡು. ಅದರ ಬದಲು ಅದೋ ನೋಡು ಸೂರ್ಯನ ಬೆಳಕು ಬರೇ ಬಯಲಿನಲ್ಲಿ ಬಿದ್ದು ನಿರರ್ಥಕವಾಗುತ್ತ ಇದೆ. ಅದನ್ನೆಲ್ಲ ತೆಗೆದುಕೊಂಡು ಹೋಗಿ ನಮ್ಮ ಮನೆಯೊಳಗೆ ತುಂಬಿಬಿಡು. ಹಾಗಾದರೆ ದೀಪ ಉರಿಸುವ ಎಣ್ಣೆಯೂ ಉಳಿಯುತ್ತೆ. ಮಳೆಗಾಲದಲ್ಲಿ ಸೂರ್ಯನ ಬೆಳಕೇ ಇಲ್ಲದಿರುವಾಗ ಸ್ವಲ್ಪ ಸ್ವಲ್ಪವೇ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತೆ ಎಂದು ಕೆಲಸ ಹೇಳಿದ ಧನಿಕ.

ಆಗಲಿ ಬುದ್ಧಿಯವರೇ ಎನ್ನುತ್ತ ತರುಣ ಹಸುವನ್ನು ಮನೆಗೆ ತಂದು ಕಟ್ಟಿ ಛಾವಣಿಯಲ್ಲಿರುವ ಹಂಚುಗಳನ್ನು ಒಂದೊಂದಾಗಿ ನೆಲಕ್ಕೆ ಎಸೆಯಲಾರಂಭಿಸಿದ. ಅವೆಲ್ಲವೂ ಒಡೆದು ಚೂರಾಗುವಾಗ ಧನಿಕ ಬಂದು ತಲೆ ಚಚ್ಚಿಕೊಂಡ. ಅಯ್ಯೋ ಮನೆಹಾಳ, ನನ್ನ ಮನೆಗೆ ಗುದ್ದಲಿ ಹಾಕೋದಕ್ಕೆ ನೀನು ಬಂದೆಯೋ? ಒಂದು ಕೆಲಸ ಹೇಳಿದರೆ ಇನ್ನೊಂದು ಮಾಡುತ್ತಿದ್ದೀಯಲ್ಲ ಎಂದು ಬೊಬ್ಬೆ ಹಾಕಿದ.

ನನ್ನದೇನು ತಪ್ಪಿದೆ? ಬೆಳಕನ್ನು ಮೇಲಿನಿಂದ ಒಳಗೆ ತುಂಬಿಸಬೇಕಲ್ಲದೆ ಬಾಗಿಲಿನ ಮೂಲಕ ಅದು ಒಳಗೆ ಬರುವುದಿಲ್ಲ ನೋಡಿ, ಹಂಚು ತೆಗೆದು ದಾರಿ ಮಾಡಿಕೊಟ್ಟು ಬೆಳಕನ್ನು ಎಷ್ಟೊಂದು ತುಂಬಿದ್ದೇನೆ ಎಂದ ತರುಣ ಹೆಮ್ಮೆಯಿಂದ. ಸರಿ, ಸರಿ, ನೀನು ಬೆಳಕು ತುಂಬಿಸಿದ್ದು ಸಾಕು. ಕೆಳಗಿಳಿ ನೋಡು, ಎದುರಿನ ಬಯಲಿನಲ್ಲಿ ವಿಶಾಲವಾದ ಸ್ಥಳವಿದೆ. ಒಳ್ಳೆಯ ಗಾಳಿ ಬರುತ್ತದೆ. ನಮ್ಮ ಮನೆಯನ್ನು ನೀನೊಬ್ಬನೇ ಅಲ್ಲಿಗೆ ಸ್ಥಳಾಂತರಿಸು ನೋಡೋಣ ಎಂದು ಹೊಸ ಕೆಲಸ ಹೇಳಿದ ಧನಿಕ. ಅದಕ್ಕೂ ತರುಣ ಹಿಂದೆಗೆಯಲಿಲ್ಲ.

ಯೆಹೋವನೇ, ನಿನ್ನ ಪುರಾತನ ವಿಧಿಗಳನ್ನು ನೆನಪುಮಾಡಿಕೊಂಡು ನನ್ನನ್ನು ಸಂತೈಸಿಕೊಂಡಿದ್ದೇನೆ (ಕೀರ್ತ. 119:52).

ಸ್ವಲ್ಪ ಹೊತ್ತಿನಲ್ಲಿ ಧನಿಕನ ಮನೆಯ ಹಿಂಭಾಗದಲ್ಲಿ ಅಗೆಯುವ ಸದ್ದು ಕೇಳಿಸಿತು. ಅದೇನೆಂದು ನೋಡಲು ಆತ ಅಲ್ಲಿಗೆ ಹೋದ. ತರುಣ ಗುದ್ದಲಿ ಹಿಡಿದು ಗೋಡೆಯ ಬುಡದಲ್ಲಿ ಹೊಂಡ ತೋಡುತ್ತ ಇದ್ದ. ಅಯ್ಯೋ ಶನಿಯೇ, ಮನೆಯನ್ನು ಕೆಡವಿ ಹಾಕುತ್ತೀಯೋ ಹೇಗೆ? ಎಂದು ಗಾಬರಿಗೊಂಡ ಧನಿಕ. ನಾನೇಕೆ ನಿಮ್ಮ ಮನೆಯನ್ನು ಕೆಡವಲಿ? ಗೋಡೆಗಳನ್ನು ಬುಡದಿಂದ ಕಿತ್ತು ಎಬ್ಬಿಸದಿದ್ದರೆ ಇಡೀ ಮನೆಯನ್ನು ಬಯಲಿಗೆ ಸ್ಥಳಾಂತರಿಸಲು ಸಾಧ್ಯವಿದೆಯೇ? ಎಂದ ತರುಣ.

ಆ ಕೆಲಸ ಅಲ್ಲಿಗೇ ಬಿಡು. ರಾತ್ರಿ ಆಕಾಶದಲ್ಲಿ ತುಂಬ ನಕ್ಷತ್ರಗಳಿವೆಯಲ್ಲ, ನೀನು ಈ ದಿನ ರಾತ್ರಿ ಎಷ್ಟು ನಕ್ಷತ್ರಗಳಿವೆ ಎಂದು ಲೆಕ್ಕ ಮಾಡಬೇಕು. ಅಷ್ಟು ಹಣ ನನ್ನಲ್ಲಿ ಇರಬೇಕಾದ್ದರಿಂದ ಲೆಕ್ಕ ಮಾಡಿ ನನಗೆ ತಿಳಿಸು ಎಂದು ಧನಿಕ ಆಜ್ಞಾಪಿಸಿದ.

ಸರಿ ಒಡೆಯ ಎಂದು ತರುಣ ಸಂಜೆಯಾಗುವಾಗ ಧನಿಕನ ಹೊಲದಲ್ಲಿದ್ದ ಕಬ್ಬುಗಳನ್ನೆಲ್ಲ ಕಡಿದು ರಾಸಿ ಹಾಕಿದ. ಅದನ್ನು ಕಂಡು ಧನಿಕನಿಗೆ ಭಯಂಕರ ಸಿಟ್ಟು ಬಂತು. ಗ್ರಹಚಾರ ಕೆಟ್ಟವನೇ, ಇದನ್ನೆಲ್ಲ ಯಾಕೋ ಕಡಿದೆ? ಎಂದು ಗರ್ಜಿಸಿದ.

ಕಾಣೋದಿಲ್ವೆ? ನಕ್ಷತ್ರಗಳು ಒತ್ತೊತ್ತಾಗಿ ಇರುವುದರಿಂದ ಒಂದೊಂದನ್ನೇ ಎಣಿಸಿ ದೂರವಿಡಬೇಕಾಗುತ್ತದೆ. ಅವು ಕೈಗೆ ಎಟಕೋದಿಲ್ಲ. ಒಂದೊಂದಾಗಿ ಕಬ್ಬನ್ನು ಜೋಡಿಸಿ ಉದ್ದನೆಯಗಳು ತಯಾರಿಸಿ ಅದರಿಂದ ದೂರ ಸರಿಸುತ್ತೇನೆ ತರುಣ ಹೇಳಿದ.

ನಿನ್ನ ಬುದ್ಧಿವಂತಿಕೆಯೂ ಸಾಕು, ನೀನೂ ಸಾಕು. ನಿನ್ನ ಕೆಲಸದಿಂದಾಗಿ ಇದಕ್ಕಿಂತ ದೊಡ್ಡ ನಷ್ಟ ನನಗೆ ಆಗುವುದು ಬೇಡ ಕೆಲಸ ಬಿಟ್ಟುಹೋಗು ಎಂದು ಹೇಳಿದ ಧನಿಕ.

ಆಗಲಿ ನನಗೂ ನಿಮ್ಮಲ್ಲಿ ನಿಂತು ಆಗಬೇಕಾದ್ದೇನೂ ಇಲ್ಲ. ಆದರೆ ನನ್ನನ್ನು ನೀವಾಗಿ ಬಿಟ್ಟು ಹೋಗಲು ಹೇಳಿದರೆ ನಿಮ್ಮ ಮೂಗು ಕತ್ತರಿಸಿ ಕೊಡುವುದಾಗಿ ಹೇಳಿದ್ದೀರಲ್ಲ ಕೊಡಿ ಇತ್ತ ಎಂದು ಚೂರಿ ಝಳಪಿಸುತ್ತ ತರುಣ ಮುಂದಡಿಯಿಟ್ಟ.

ಅಯ್ಯೋ, ನನ್ನ ಮೂಗು ಕತ್ತರಿಸಬೇಡ, ನನ್ನನ್ನು ರಕ್ಷಿಸು ಕ್ಷಮಿಸು ಎಂದು ಧನಿಕ ಅಳುತ್ತ ಅವನ ಕಾಲು ಹಿಡಿದು ಬೇಡಿದ. ನಿಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಟ್ಟು ಆಸ್ತಿಯನ್ನೇ ಬಳುವಳಿಯಾಗಿ ನೀಡುತ್ತೀರಾ? ಎಂದು ತರುಣ ಕೇಳಿದಾಗ ತನ್ನ ಮೂಗನ್ನು ಉಳಿಸಿಕೊಳ್ಳಲು ಧನಿಕ ಆ ಮಾತಿಗೆ ಒಪ್ಪಿಕೊಂಡ.

ಸಂಗ್ರಹ.

# ಸಾಕ್ಷಿಯ ಸ್ವರ

ನನಗೆ ಉರಿ ಮೂತ್ರ ಇತ್ತು. ಪದೇ ಪದೇ ಹೋಗುತ್ತಲೇ ಇರಬೇಕಿತ್ತು ಮತ್ತು ಮೂವತ್ತು ವರ್ಷಗಳಿಂದ ಬಿಸಿ ನೀರು ಬೇಸಿಗೆಯಲ್ಲೂ ಕುಡಿಯುತ್ತಿದ್ದೆ ಮತ್ತು ಕೆಮ್ಮು ಆಗಾಗ್ಗೆ ಬರುತ್ತಿತ್ತು ಒಂದೊಂದು ಸಮಯದಲ್ಲಿ ರಾತ್ರಿ ವೇಳೆ ನಿದ್ರೆ ಬರುತ್ತಿರಲಿಲ್ಲ ಈ 9ನೇ ಕೆರೀತ್ ಕೂಟದಲ್ಲಿ ಕರ್ತನು ಇದೆಲ್ಲದರಿಂದ ಸಂಪೂರ್ಣ ಬಿಡುಗಡೆಯನ್ನು ಕೊಡುತ್ತಿದ್ದಾನೆ ಈಗ ತಣ್ಣೀರು ಕುಡಿದರೂ ಯಾವುದೇ ಸಮಸ್ಯೆಯಿಲ್ಲ. ದೇವರ ನಾಮಕ್ಕೆ ಕೋಟಿ ಕೋಟಿ ಸ್ತೋತ್ರಗಳು. "ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು" (ಯೆಶಾ. 53:5).

**ಗಂಗಮ್ಮ ಎನ್.**, ತುಮಕೂರು.

ನಾನು ಈ ಕೂಟಕ್ಕೆ ಶರೀರದಲ್ಲಿ ತುಂಬಾ ಭಾರವನ್ನು ಇಟ್ಟುಕೊಂಡು ಬಂದಿದ್ದೆ ದೇವರು ಈ 9ನೇ ಕೆರೀತ್ ಕೂಟದಲ್ಲಿ ಇದರಿಂದ ಬಿಡುಗಡೆಕೊಟ್ಟು ದೇವರ ವಾಕ್ಯದ ಮೂಲಕ ನನ್ನನ್ನು ಬಲಪಡಿಸಿದರು ಮಾತ್ರವಲ್ಲದೆ ನನ್ನ ಮಗನ ಜೀವಿತದಲ್ಲಿ ಸಹ ದೇವರು ಬಿಡುಗಡೆ ಕೊಟ್ಟಿದ್ದಾರೆ ಆತನ ಪರಿಶುದ್ಧವಾದ ನಾಮಕ್ಕೆ ಸ್ತೋತ್ರ. "ಆತನು [ದೂತನನ್ನೋ ಎಂಬಂತೆ] ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು" (ಕೀರ್ತ. 107:20).

**ಸ್ಟೆಲ್ಲಾ,** ಮಂಗಳೂರು.

**ವಿಶೇಷ ಸೂಚನೆ**

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು (ಫಿಲಿ. 4:7).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಅಮೆಜಾನ್, ಫ್ಲಿಪ್‌ಕಾರ್ಟ್ ಮಾದರಿಯಲ್ಲೇ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಹೊಸ ಇ-ಮಾರ್ಕೆಟಿಂಗ್ ಪೋರ್ಟಲ್ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಸದ್ಯದಲ್ಲೇ ಈ ಕುರಿತು ಮಾರ್ಗಸೂಚಿ ಜಾರಿಗೊಳಿಸಲಿದೆ ಎಂದು ಮೂಲಗಳು ತಿಳಿಸಿವೆ.
- ದೇಶದ ಎಲ್ಲಾ ರಾಜ್ಯಗಳಲ್ಲೂ ಔಷಧ ದರ ನಿಯಂತ್ರಣ ಕೇಂದ್ರ ಸ್ಥಾಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಕರ್ನಾಟಕ, ರಾಜಸ್ಥಾನ ಹಾಗೂ ಮಹಾರಾಷ್ಟ್ರಗಳಲ್ಲಿ ಔಷಧ ದರ ನಿಯಂತ್ರಣ ಕೇಂದ್ರ ಸ್ಥಾಪನೆ ಪ್ರಕ್ರಿಯೆ ಈಗಾಗಲೇ ಆರಂಭಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.
- ಎರಡು ಲಕ್ಷದ ಎಪ್ಪತ್ತು ಸಾವಿರ ಟನ್ ತೂಕ ಹೊಂದಿದ ಸುಮಾರು ಐದು ಲಕ್ಷ ಕೋಟಿ ಪ್ಲಾಸ್ಟಿಕ್ ತುಣುಕುಗಳನ್ನು ಹಿಂದೂ ಮಹಾಸಾಗರ ಸೇರಿದಂತೆ ವಿಶ್ವದ ಸಾಗರಗಳಿಂದ ಸಂಗ್ರಹಿಸಲಾಗಿದೆ ಎಂದು ಅಧ್ಯಯನವೊಂದು ತಿಳಿಸಿದೆ.

ಸಂಗ್ರಹ.

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820 2559886**

## ಬೇಕಾಗಿದ್ದಾರೆ

- ಸ್ಟಾಫ್ ನರ್ಸ್ (ಜಿಎನ್‌ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)
- ಎಮ್‌ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)
- ಎಮ್.ಬಿ.ಬಿ.ಎಸ್ ವೈದರು
- ಮನೋರೋಗ ತಜ್ಞವೈದ್ಯರು (ಸೈಕಿಯಾಟ್ರಿಸ್ಟ್)
- ಕ್ಲೀನರ್ ಮತ್ತು ವಾರ್ಡ್ ಬಾಯ್
- ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.

ಉಚಿತ ವಸತಿ ಸೌಕರ್ಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**

ಬಡವರನ್ನು ಆಹಾರದಿಂದ ತೃಪ್ತಿಗೊಳಿಸುವೆನು; ಯಾಜಕರಿಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸುವೆನು (ಕೀರ್ತ. 132:15-16).

# ಬಾಳೆ ಹಣ್ಣು ಸಿಪ್ಪೆ ನಿರ್ಲಕ್ಷ್ಯ ಬೇಡ

ಆರೋಗ್ಯ ಸ್ವರ

ಬಾಳೆಹಣ್ಣು ಆರೋಗ್ಯಕರ ಹಣ್ಣು ಎಂದೇ ಪ್ರಸಿದ್ಧಿ ಪಡೆದಿದೆ. ಆದರೆ ಇದರ ಸಿಪ್ಪೆ ಕೂಡ ಒಳ್ಳೆಯದು ಎಂದು ಹಲವರಿಗೆ ತಿಳಿದಿಲ್ಲ. ಬಾಳೆಹಣ್ಣು ಸಿಪ್ಪೆಯಲ್ಲಿ ಆ್ಯಂಟಿಆಕ್ಸಿಡೆಂಟ್ ವಿಟಮಿನ್ಸ್ ಮತ್ತು ಮಿನರಲ್ಸ್ ಇದೆ. ಹೀಗಾಗಿ ಬಾಳೆಹಣ್ಣು ಸಿಪ್ಪೆಯ ಮಹತ್ವದ ಬಗ್ಗೆ ತಿಳಿದುಕೊಳ್ಳುವುದು ಒಳ್ಳೆಯದು.

**ಮಿಶ್ರಗೊಬ್ಬರವನ್ನು ಸಿದ್ಧಪಡಿಸಿ :** ಬಾಳೆಹಣ್ಣು ಸಿಪ್ಪೆಯು ವೇಗವಾಗಿ ಕರಗಬಲ್ಲದು, ಮಣ್ಣಿಗೆ ಅನೇಕ ಪೋಷಕಾಂಶಗಳನ್ನು ಒದಗಿಸಬಲ್ಲದು. ಬಾಳೆಹಣ್ಣಿನ ಸಿಪ್ಪೆಯನ್ನು ಗಿಡದ ಬುಡಕ್ಕೆ ಹಾಕಿದರೆ ಅವು ವೇಗವಾಗಿ ಬೆಳೆಯುವುದನ್ನು ಗಮನಿಸಬಹುದು.

**ಸಿಪ್ಪೆಯನ್ನು ಸೇವಿಸಿ :** 10 ನಿಮಿಷ ಸಿಪ್ಪೆಯನ್ನು ಬೇಯಿಸಿ. ಅದನ್ನು ಬೇರೆ ಹಣ್ಣಿನೊಂದಿಗೆ ಸೇರಿಸಿ ಸೇವಿಸಿದರೆ ಪೌಷ್ಟಿಕಾಂಶ ಸಿಗುತ್ತದೆ. ಸಿಪ್ಪೆಯನ್ನು ಉಪಯೋಗಿಸುವುದಕ್ಕೂ ಮುನ್ನ ಚೆನ್ನಾಗಿ ಸ್ವಚ್ಛವಾಗಿ ತೊಳೆಯಬೇಕು.

**ಗಾಯ ವಾಸಿ ಮಾಡುತ್ತದೆ :** ಬಾಳೆಹಣ್ಣು ಸಿಪ್ಪೆ ಗಾಯವನ್ನು ವಾಸಿಮಾಡುತ್ತದೆ ಎಂದು ತಿಳಿದಿರಲಿಕ್ಕಿಲ್ಲ. ಬಾಳೆಹಣ್ಣು ಸಿಪ್ಪೆಯನ್ನು ಗಾಯದ ಮೇಲೆ ಉಜ್ಜಿ ಅಥವಾ ಅದರ ಮೇಲೆ ಇಡಿ. ಹೀಗೆ ಮಾಡುವುದರಿಂದ ಗಾಯ ಬೇಗ ವಾಸಿಯಾಗುತ್ತದೆ.

**ಲೆದರ್, ಬೆಳ್ಳಿ ಆಭರಣಕ್ಕೆ ಪಾಲಿಶ್ ಮಾಡಿ :** ಬಾಳೆಹಣ್ಣು ಸಿಪ್ಪೆಯ ಒಳಭಾಗವನ್ನು ಲೆದರ್ ಶೂ ಮೇಲೆ ಹಾಕಿ ಉಜ್ಜಿದರೆ ಹೊಳಪು ಬರುತ್ತದೆ. ಸಿಪ್ಪೆಯನ್ನು ನೀರಿನೊಂದಿಗೆ ಮಿಶ್ರಣ ಮಾಡಿ ನಂತರ ಇದನ್ನು ಬೆಳ್ಳಿ ಆಭರಣ ತೊಳೆಯಲು ಬಳಸಬಹುದು.

**ಗುಳ್ಳೆಯನ್ನು ಹೋಗಲಾಡಿಸಿ :** ಚರ್ಮದ ಮೇಲೆ ಗುಳ್ಳೆ, ಚಿಕ್ಕಗಂಟು ಉಂಟಾಗಿದ್ದರೆ ಬಾಳೆಹಣ್ಣು ಸಿಪ್ಪೆಯನ್ನು ಅದರ ಮೇಲೆ ಇಟ್ಟು ರಾತ್ರಿಪೂರ್ತಿ ಹಾಗೆಯೇ ಬಿಡಿ. ಇದು ಗುಳ್ಳೆಯನ್ನು ಕಡಿಮೆ ಮಾಡುತ್ತದೆ ಪೂರ್ತಿ ಹೋಗುವವರೆಗೆ ಈ ರೀತಿ ಮಾಡಿ.

**ಮುಳ್ಳು ತೆಗೆಯುವುದು :** ವೈದ್ಯರ ಪ್ರಕಾರ ಬಾಳೆಹಣ್ಣು ಸಿಪ್ಪೆ ಚರ್ಮದೊಳಗೆ ಗಾಯವಾಗಿ ಸೇರುವ ಮುಳ್ಳು, ಮರದ ಚೂರು, ಗಾಜಿನ ಚೂರು ಮೊದಲಾದ ವಸ್ತುಗಳು ಸುಲಭವಾಗಿ ಹೊರಗೆ ತೆಗೆಯಲು ನೆರವು ನೀಡುತ್ತದೆ. ಗಾಯದ ಮೇಲೆ ಬಾಳೆಹಣ್ಣಿನ ಸಿಪ್ಪೆಯ ಒಳಭಾಗವನ್ನು ಹಾಕಿ ಪ್ಲಾಸ್ಟರ್ ಹಾಕಿ ಕಟ್ಟಿ ಹಾಗೆಯೇ ಬಿಡಿ. ಸಿಪ್ಪೆಯ ಕಿಣ್ವಗಳು ಚರ್ಮವನ್ನು ಮೃದು ಮಾಡುತ್ತದೆ ಮತ್ತು ಗಾಯದೊಳಗೆ ಸೇರಿರುವ ವಸ್ತುವನ್ನು ಸುಲಭವಾಗಿ ಹೊರಗೆ ಬರುವಂತೆ ಮಾಡುತ್ತದೆ.

**ಕೀಟಗಳನ್ನು ತೊಡೆದುಹಾಕಿ :** ಗಿಡಹೇನುಗಳಾದ ಗ್ರೀನ್ ಫ್ಲೈಸ್, ಬ್ಲ್ಯಾಕ್‌ಫ್ಲೈಸ್ ಮತ್ತು ವೈಟ್‌ಫ್ಲೈಸ್‌ನ್ನು ಬಾಳೆಹಣ್ಣು ಸಿಪ್ಪೆಯು ನಿಯಂತ್ರಣಕ್ಕೆ ತರುತ್ತದೆ ಎಂದು ಉದ್ಯಾನ ತಜ್ಞರು ಹೇಳುತ್ತಾರೆ. ಬಾಳೆಹಣ್ಣಿನ ಸಿಪ್ಪೆಯ ನೀರನ್ನು ಗಿಡದ ಮೇಲೆ ಚಿಮುಕಿಸಿ, ಕೈತೋಟದಲ್ಲಿ ಸಿಪ್ಪೆ ಸುಟ್ಟರು ಗಿಡಗಳಿಗೆ ಒಳ್ಳೆಯದು. ಎರಡೇ ದಿನಗಳಲ್ಲಿ ಕೀಟಗಳು ಮಾಯವಾಗುತ್ತವೆ.

**ಪಾರಿಜಾತದ ಔಷಧೀಯ ಗುಣ :**

- 3–4 ಚಮಚ ಪಾರಿಜಾತ ಎಲೆಯ ರಸಕ್ಕೆ 2 ಚಮಚ ಶುಂಠಿ ರಸವನ್ನು ಸೇರಿಸಿ ಸೇವಿಸಿದರೆ ಬಿಟ್ಟು ಬಿಟ್ಟು ಬರುವ ಜ್ವರ ಕಡಿಮೆಯಾಗುತ್ತದೆ.
- ಪಾರಿಜಾತ ಎಲೆಯ ರಸಕ್ಕೆ ಜೇನು, ಉಪ್ಪು ಸೇರಿಸಿ ಸೇವಿಸಿದರೆ ಮೂತ್ರವು ಸುಲಭವಾಗಿ ಹೋಗುತ್ತದೆ.
- ತುರಿಕೆಯಾದಾಗ ಪಾರಿಜಾತದ ತೊಗಟೆಯನ್ನು ತೇದು ಹಚ್ಚಿದರೆ ಬೇಗ ಗುಣವಾಗುವುದು.
- ಪಾರಿಜಾತದ ಬೀಜವನ್ನು ನೀರಿನಲ್ಲಿ ಅರೆದು ನೆತ್ತಿಗೆ ಹಚ್ಚಿದರೆ ತಲೆಹೊಟ್ಟು, ಹೇನು ಮಾಯವಾಗುತ್ತದೆ.
- 2 ಔನ್ಸ್ ಎಲೆಯ ಕಷಾಯವನ್ನು 1 ಚಮಚ ಜೇನುತುಪ್ಪದ ಜತೆ ಸೇವಿಸಿದರೆ ಸಂಧಿವಾತ, ಕೀಲು ನೋವು ಬೇಗ ಕಡಿಮೆಯಾಗುತ್ತದೆ.
- 1 ಭಾಗ ಪಾರಿಜಾತದ ಹೂವನ್ನು 4 ಭಾಗ ಎಣ್ಣೆಯ ಜೊತೆ ಕಾಯಿಸಿ ಎಣ್ಣೆಯನ್ನು ಹಚ್ಚಿದರೆ ಚರ್ಮದ ತುರಿಕೆ ಮತ್ತು ತಲೆನೋವು ಕಡಿಮೆಯಾಗುತ್ತದೆ.

ಸಂಗ್ರಹ.

ನನ್ನ ಅಭಿಷಿಕ್ತನ ದೀಪವು ಉರಿಯುತ್ತಲೇ ಇರಬೇಕೆಂದು ನೇಮಿಸಿದ್ದೇನೆ
(ಕೀರ್ತ. 132:17).

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ,**
**ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0820 2559886**

## ವಿಶ್ವಾಸದಮನೆಗೆ ಬೇಟಿ ನೀಡಿದವರ ಅನಿಸಿಕೆಗಳು :

ನಾವು ಉಡುಪಿ ಲಯನ್ಸ್ ಕ್ಲಬ್ ಉಡುಪಿ ಚೇತನಾದ ವತಿಯಿಂದ ವಿಶ್ವಾಸದಮನೆಗೆ ಭೇಟಿ ಇತ್ತು. ಇಲ್ಲಿಯ ವಾತವರಣ ಸ್ವಂತ ಅನುಭವವನ್ನು ವೀಕ್ಷಿಸುವಂತಾಯಿತು. ಈ ಸಂಸ್ಥೆಯ ಮೂಲಕ ಮಾನಸಿಕ ದುರ್ಬಲರಿಗೆ, ಅಸ್ವಸ್ಥರಿಗೆ ವಿಶ್ವಾಸವನ್ನು ತುಂಬುವಲ್ಲಿ ಮಾಡುವ ಸೇವೆಯು ಶ್ಲಾಘನೀಯ. ಈ ಸಂಸ್ಥೆಯೊಂದಿಗೆ ಅಂತರಾಷ್ಟ್ರೀಯ ಸೇವಾ ಸಂಸ್ಥೆಯ ಮೂಲಕ ಸಣ್ಣ ರೀತಿಯ ಸೇವೆಯನ್ನು ಸಲ್ಲಿಸುವ ಅವಕಾಶ ಕೊಟ್ಟ ದೇವರಿಗೆ ಉಪಕಾರವನ್ನು ತಿಳಿಸುತ್ತೇವೆ. ಇಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಮಿತ್ರರಿಗೂ ದೇವರು ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ. ವಂದನೆಗಳೊಂದಿಗೆ

**ಶಿವಪ್ರಸಾದ್ ಶೆಟ್ಟಿ,** ಅಧ್ಯಕ್ಷರು, ಲಯನ್ಸ್ ಕ್ಲಬ್ ಉಡುಪಿ, ಚೇತನಾ.

ಕಾಪು ಮಹಿಳಾ ಕಾಂಗ್ರೆಸ್ ಮತ್ತು ಜಿಲ್ಲಾ ಮಹಿಳಾ ಕಾಂಗ್ರೆಸ್ ಜಂಟಿಯಾಗಿ ದಿ| ರಾಜೀವ್ ಗಾಂಧಿ ಜನ್ಮ ದಿನ ಮತ್ತು ದಿ| ದೇವರಾಜ ಅರಸು ಜನ್ಮ ದಿನವನ್ನು ವಿಶ್ವಾಸದ ಮನೆಯಲ್ಲಿ ಆಚರಿಸಿದೆವು. ಸಹ ಭೋಜನದೊಂದಿಗೆ ನಡೆದ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾಗಿತ್ತು. ವಿಶ್ವಾಸದ ಮನೆಯಲ್ಲಿ ನಡೆಯುವ ನಿರ್ಗತಿಕರ, ಮಾನಸಿಕ ರೋಗಿಗಳ, ವೃದ್ಧರ, ಮಹಿಳೆಯರ, ಅಂಗವೀಕಲರ ಹಾಗೂ ಮಕ್ಕಳ ಸೇವೆ ನಿಜವಾಗಿ ಶ್ಲಾಘನೀಯ ಇದೊಂದು ದೇವರ ಕಾರ್ಯ ಎಂದು ನಾವು ಭಾವಿಸುತ್ತೇವೆ. ಈ ಸೇವೆಗೆ ನಿಜವಾಗಿ ಸಹೃದಯಿಗಳ ಸಹಕಾರ ಅತೀ ಅಗತ್ಯ. ಭಗವಂತನು ಪಾ|| ಸುನಿಲ್ ಮತ್ತು ಕುಟುಂಬ ಹಾಗೂ ಇಲ್ಲಿ ಸೇವೆ ನೀಡುವಂತಹ ಎಲ್ಲಾ ಸಿಬ್ಬಂದಿಗಳಿಗೆ ನೆಮ್ಮದಿ ಸಂತೋಷವನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.

**ವೆರೋನಿಕಾ ಕರ್ನೇಲಿಯೋ,** ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಉಡುಪಿ.

ನೀತಿಸ್ಥಾಪಕನಾದ ನೀನು ನನ್ನನ್ನು ಬಿಡಿಸಿ ಪಾರುಮಾಡು;
ನನ್ನ ಪ್ರಾರ್ಥನೆಗೆ ಕಿವಿಗೊಟ್ಟು ಉದ್ಧರಿಸು (ಕೀರ್ತ. 71:2).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ (ಯೋಹಾ. 14:27).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

7) **ಮತಾಭಿಮಾನ (ಮತದ ಮೇಲಿರುವ ಪ್ರೀತಿ) ಮತ್ತು ಜನರು ಬಿಟ್ಟು ಹೋದರೆಂಬ ಭಯದ ನಿಮಿತ್ತವಾಗಿ ದುರ್ಬೋಧನೆಗಳು ಪ್ರಕಟವಾಗುತ್ತದೆ.** ಅ.ಕೃ. 5:17–18 ಹೀಗಿರುವಲ್ಲಿ ಮಹಾಯಾಜಕನೂ ಸದ್ದುಕಾಯರ ಮತಕ್ಕೆ ಸೇರಿದವರಾದ ಅವನ ಜೊತೆಯಲ್ಲಿದ್ದವರೆಲ್ಲರೂ ಎದ್ದು ಮತಾಭಿಮಾನದಿಂದ ತುಂಬಿದವರಾಗಿ ಅಪೋಸ್ತಲರನ್ನು ಹಿಡಿದು ಪಟ್ಟಣದ ಕಾವಲಿನಲ್ಲಿಟ್ಟರು. ಮತಧರ್ಮ ಎಲ್ಲವನ್ನು ಉಂಟು ಮಾಡಿದವನು ಮನುಷ್ಯನಾಗಿದ್ದಾನೆ ದೇವರಲ್ಲವೆಂದು ತಿಳಿದುಕೊಳ್ಳಬೇಕು. ಅನೇಕ ಜನರಿಗೆ ಮತದ ಮೇಲೆ ಪ್ರೀತಿ ಇದೆಯೇ ಹೊರತು ದೇವರ ಮೇಲೆ ಅಲ್ಲ. ಇದರಿಂದಾಗಿ ಒಂದು ಮತದವರು ಇನ್ನೊಂದು ಮತದವರನ್ನು ನೋಡುವಾಗ ಹಗೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಕರ್ತನಾದ ಯೇಸುಕ್ರಿಸ್ತನು ಈ ಲೋಕಕ್ಕೆ ಬಂದಂತಹ ಉದ್ದೇಶ ಜಾತಿ, ಮತ ಸ್ಥಾಪನೆ ಅಲ್ಲ, ಪಾಪಿಯಾದ ಮನುಷ್ಯನನ್ನು ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡಿಸಿ ಪರಲೋಕದಲ್ಲಿ ನಿತ್ಯ ರಾಜ್ಯಕ್ಕೆ ಬಾಧ್ಯರನ್ನಾಗಿಸುವಂತದ್ದು. ಮತದ ಆಚರಣೆಗಳಿಂದ ಕರ್ತನಾದ ಯೇಸುವನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲ.

ಮನುಷ್ಯನು ತಾನು ಕಟ್ಟಿದ ಮತವನ್ನು ಉಳಿಸಿಕೊಳ್ಳಲು ಇಂದು ಮಾಡುವ ಕಾರ್ಯಗಳು :–

1) ಯಾರು ಕೂಡ ನಿತ್ಯತ್ವದ ಸತ್ಯವನ್ನು ಅರ್ಥ ಮಾಡಿಕೊಳ್ಳದ ಹಾಗೆ ಹೋರಾಡುವದು.

2) ಜನರನ್ನು ತಪ್ಪಾದ (ದೇವರ ವಾಕ್ಯ ಒಪ್ಪದ ವಿಷಯಗಳಿಗೆ) ಸಂಪ್ರದಾಯಗಳಲ್ಲಿ ಕಟ್ಟಿ ಹಾಕುವದು. (ದೇವರ ವಾಕ್ಯದಲ್ಲಿ ಇರದೆ ಇರುವವುಗಳನ್ನು ಉಪದೇಶಿಸುವಂತದ್ದು)

1) **ಯಾವ ವ್ಯಕ್ತಿ ಕೂಡ ನಿತ್ಯತ್ವದ ಸತ್ಯವನ್ನು ತಿಳಿದುಕೊಳ್ಳದ ಹಾಗೆ ಹೋರಾಡುವದು** :– ನಾನು ಒಂದು ರೋಮನ್ ಕೆಥೋಲಿಕ್ ಕುಟುಂಬದಲ್ಲಿ ಹುಟ್ಟಿ ಬೆಳೆದವನು. ನಾನು ಆಗಾಗ ಚರ್ಚಿಗೆ ಹೋಗುವಾಗ ಚರ್ಚಿನಲ್ಲಿ ಪಾದ್ರಿಯವರು ಆಗಾಗ ಪ್ರಕಟಿಸುವಂತಹ ಸಂಗತಿಯಾಗಿತ್ತು ಯಾರಾದರೂ ಬೈಬಲ್ ಕೈಯಲ್ಲಿ ಹಿಡಿದುಕೊಂಡು ಬಂದರೆ ಮನೆಗೆ ಸೇರಿಸಬೇಡಿ, ಅವರು ಹೇಳುವುದನ್ನು ಕೇಳಬೇಡಿ, ಅವರನ್ನು ಓಡಿಸಿ ಬಿಡಿ ಎಂದೆಲ್ಲಾ ಸಾರಿ ಹೇಳುತ್ತಿದ್ದರೂ ಅವಾಗ ದೇವರ ವಾಕ್ಯ ತಿಳಿಯದೇ ಇರುವ ಕಾರಣ ಯಾಕೆ ಈ ರೀತಿ ಹೇಳುತ್ತಾರೆ? ಬೈಬಲ್ ಉಪದೇಶ ಮಾಡಿದರೆ ಇವರಿಗೆ ಏನು ತೊಂದರೆ ಎಂದು ನನಗೆ ತಿಳಿಯುತ್ತಿರಲಿಲ್ಲ. ದೇವರ ವಾಕ್ಯ ಹೇಳುತ್ತದೆ, ಯೋಹಾ. 8:31–32 ಆಗ ಯೇಸು ತನ್ನನ್ನು ನಂಬದ ಯೆಹೂದ್ಯರಿಗೆ ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು ಎಂದು ಹೇಳಿದನು.

ನಾವು ದೇವರ ವಾಕ್ಯದಲ್ಲಿ ನೆಲೆಗೊಂಡರೆ ಮಾತ್ರ ಸತ್ಯವನ್ನು ತಿಳಿದುಕೊಳ್ಳುತ್ತೇವೆ ಮತ್ತು ಸತ್ಯವು ನಮ್ಮನ್ನು ಬಿಡುಗಡೆ ಮಾಡುತ್ತದೆ. ಹಾಗಾದರೆ ನಾವು ತಿಳಿದುಕೊಳ್ಳಬೇಕಾದ ಸತ್ಯ ಯಾವುದು? ಯಾವುದರಿಂದ ನಮಗೆ ಬಿಡುಗಡೆಯಾಗುವುದು? ದೇವರ ವಾಕ್ಯದಲ್ಲಿ ನಮ್ಮ ರಕ್ಷಣೆ ಅದರ ಮೂಲಕವಾಗಿ ನಮಗೆ ಸಿಕ್ಕಿದ ಆಶೀರ್ವಾದಗಳು, ನಿತ್ಯಜೀವ, ಪ್ರತಿಫಲ ಕಿರೀಟಗಳು ಇತ್ಯಾದಿ ಅನೇಕ ಸಂಗತಿಗಳು ಬರೆಯಲ್ಪಟ್ಟಿವೆ. ನಾನು ಮುಂಚೆ ತಿಳಿದದ್ದು (ರೋಮನ್ ಕೆಥೋಲಿಕ್ ಚರ್ಚಿಗೆ ಹೋಗುತ್ತಿದ್ದಾಗ) ಪರಲೋಕ ಸಿಗಬೇಕಾದರೆ ಕ್ರೈಸ್ತ ಕುಟುಂಬದಲ್ಲಿ ಹುಟ್ಟಿ ಅದರ (ಅಂದರೆ ರೋಮನ್ ಕೆಥೋಲಿಕ್ ಸಭೆಯ ಕಟ್ಟಳೆಗಳನ್ನು ಅನುಸರಿಸಬೇಕು 7 ಸಂಸ್ಕಾರಗಳನ್ನು ಹೊಂದಬೇಕು) ಆದರೆ ಯಾವಾಗ ದೇವರ ವಚನ ಓದಿ ತಿಳುವಳಿಕೆ ಬಂದಾಗ ನನಗೆ ಆಶ್ಚರ್ಯವಾಯಿತು. ಪರಲೋಕ ಸಿಗಬೇಕಾದರೆ ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ದೇವರ ಬಳಿಯಲ್ಲಿ ಕ್ಷಮಾಪಣೆ ಕೇಳಿ ಪಾಪಗಳನ್ನು ಅರಿಕೆ ಮಾಡಿ ಬಿಟ್ಟು ಯೇಸುವು ಪಾಪಗಳ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡು ನಾನು ಸಾಯುವ ಸ್ಥಳದಲ್ಲಿ (ಶಿಲುಬೆಯಲ್ಲಿ) ಸತ್ತಿದ್ದಾನೆ, ನನಗಾಗಿ ಹೂಣಲ್ಪಟ್ಟಿದ್ದಾನೆ ಮತ್ತು ನನಗಾಗಿ 3ನೇ ದಿನದಲ್ಲಿ ಎದ್ದು ಬಂದಿದ್ದಾನೆ ಎಂಬ ಸತ್ಯವನ್ನು ಒಪ್ಪಿ ಹೃದಯದಲ್ಲಿ ನಂಬಿ ಬಾಯಲ್ಲಿ ಅರಿಕೆ ಮಾಡಿ ಕರ್ತನಾದ ಯೇಸುಕ್ರಿಸ್ತನನ್ನು ನನ್ನ ಜೀವಿತದ ರಕ್ಷಕನು ಒಡೆಯನಾಗಿ ಸ್ವೀಕರಿಸಿ ಮುಂದಿನ ಜೀವಿತವನ್ನು ಆತನ ವಚನಗಳ ಪ್ರಕಾರ ಪರಿಶುದ್ಧವಾಗಿ ಜೀವಿಸುವ ತೀರ್ಮಾನ ಮಾಡಿದರೆ ನನಗೆ ಪರಲೋಕ ಸಿಗುತ್ತದೆಂದು ತಿಳಿದುಕೊಂಡೆ.

ನನ್ನ ದೇವರು ನನ್ನ ಕಡೆಗೆ ಕಿವಿಗೊಡುವನು (ಮೀಕ. 7:7).

ಪರಲೋಕ ಸಿಗಲು ಧರ್ಮದ ಕಟ್ಟಳೆಗಳನ್ನೆಲ್ಲ ಪಾಲಿಸಬೇಕಾದದ್ದು ದೇವರ ವಾಕ್ಯದಲ್ಲಿ ಬರೆದಂತಹ ಮಾತುಗಳಿಗೆ ವಿಧೇಯರಾಗಿ ಅನುಸರಿಸಿದರೆ ಮಾತ್ರ ಪರಲೋಕ ರಾಜ್ಯ ಸಿಗುವುದಾಗಿದೆ. ಮತದ ಆಚರಣೆ ಮಾಡಿದವರು ಮತದಲ್ಲಿ ಜೀವಿಸಬಹುದು. ಪರಲೋಕದಲ್ಲಿ ಜೀವಿಸಬೇಕಾದರೆ ದೇವರ ವಾಕ್ಯಗಳನ್ನು ತಿಳಿದು ಅದರ ಪ್ರಕಾರ ಜೀವಿಸಬೇಕು. "ಕಪಟಿಗಳಾದ ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ. ಅವನು ಬರೆದದ್ದೇನೆಂದರೆ ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೇ. ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದ್ದೀರಿ ಎಂದು ಹೇಳಿದನು" (ಮಾರ್ಕ. 7:6–8). ಧಾರ್ಮಿಕ ನಾಯಕರಿಗೆ ಜನರು ಪ್ರಾರ್ಥನೆಗೆ ಹೋಗುವುದು ಇಷ್ಟವಿಲ್ಲ. ದೇವರ ವಾಕ್ಯ ಓದಿ ಅದರಲ್ಲಿರುವ ಸತ್ಯಗಳನ್ನು ತಿಳಿದುಕೊಳ್ಳುವುದು ಇಷ್ಟವಿಲ್ಲ ಯಾಕೆ? ಜನರು ಸತ್ಯ ತಿಳಿದುಕೊಂಡರೆ ಅವರಿಗಿಂತಲೂ ಹೆಚ್ಚು ದೇವರಿಗೆ ಮರ್ಯಾದೆ ಕೊಡಲು ಆರಂಭಿಸುತ್ತಾರೆ. ಜನರು ದೇವರ ವಾಕ್ಯದಲ್ಲಿ ಇಲ್ಲದ ತಾವು ಅನುಸರಿಸುವ ಸಂಪ್ರದಾಯಗಳನ್ನು ನಿಲ್ಲಿಸಿ ಬಿಡುತ್ತಾರೆ. ಆದಾಯವೂ ನಷ್ಟವಾಗುತ್ತದೆ. ಜನರು ಪರಲೋಕಕ್ಕೆ ಹೋಗುತ್ತಾರೆ ಎಂಬ ಸಂತೋಷಕ್ಕಿಂತಲೂ ಜನರು ತಮ್ಮ ಹಿಡಿತದಿಂದ ತಪ್ಪಿಸಿಕೊಳ್ಳುತ್ತಾರೆ ಎಂಬ ಭಯ ಅವರಿಸುತ್ತದೆ.

ಯೋಹಾ. 5:14 ರಲ್ಲಿ ಸುಂದರವಾದ ದೃಷ್ಟಾಂತವಿದೆ. ಬೇತ್ಸಥಾ ಕೊಳದ ವಿಶೇಷತೆ ಏನೆಂದರೆ ಒಂದು ನಿರ್ದಿಷ್ಟವಾದ ಸಮಯದಲ್ಲಿ ದೇವದೂತನು ಬಂದು ಅದರ ನೀರನ್ನು ಕಲಕಿಸುತ್ತಾನೆ. ಆಗ ಯಾವುದೇ ರೋಗಿಯು ಅದರಲ್ಲಿ ಇಳಿದರೆ ತಕ್ಷಣ ಅವನಿಗೆ ಸೌಖ್ಯ ಸಿಗುತ್ತಿತ್ತು. 38 ವರ್ಷಗಳಿಂದ ಈ ವ್ಯಕ್ತಿಗೆ ನಡೆಯಲು ಸಾಧ್ಯವಾಗದ ಕಾರಣ ಯಾರು ಅವನಿಗೆ ಸಹಾಯ ಮಾಡಲು ಬರಲಿಲ್ಲ, ಯಾವ ಧಾರ್ಮಿಕ ನಾಯಕರು ಬರಲಿಲ್ಲ. ಈ ಪರಿಸ್ಥಿತಿಯಲ್ಲಿ ಯೇಸು ನೋಡಿ ಆತನನ್ನು ಸೌಖ್ಯಕ್ಕೆ ನಡೆಸಿದ ಆ ದಿವಸ ಸಬ್ಬತ್ ದಿನವಾಗಿತ್ತು. ಈತನು ಯೇಸುವಿನ ಆಜ್ಞೆಯಂತೆ ತನ್ನ ಹಾಸಿಗೆ ಹೊತ್ತುಕೊಂಡು ನಡೆದ ದಾರಿಯಲ್ಲಿ ಧಾರ್ಮಿಕ ಜನರು ಅವನನ್ನು ತಡೆದು ನಿಲ್ಲಿಸಿ ಇಂದು ಸಬ್ಬತ್ ನೀನು ಹಾಸಿಗೆ ಎತ್ತಿಕೊಂಡು ಹೋಗಲು ಸಾಧ್ಯವಿಲ್ಲವೆಂದರು (ಯೋಹಾ. 5:10). ಕಳೆದ 38 ವರ್ಷಗಳಿಂದ ಈತನು ರೋಗಿಯಾಗಿ ಯಾರ ಸಹಾಯವೂ ಇಲ್ಲದೆ ಕೈಬಿಡಲ್ಪಟ್ಟು ಪರಿತಾಪಕರವಾಗಿ ಬಿದ್ದಿದ್ದಾಗ ಯಾರು ಕೂಡ ಈತನನ್ನು ಸಬ್ಬತ್ ನೆನಪಿಸಲು ಆಲಯಕ್ಕೆ ಕರೆದೊಯ್ಯಲು ಬರಲಿಲ್ಲ. ಆದರೆ ಈತನು ಕರ್ತನಾದ ಯೇಸುಕ್ರಿಸ್ತನಿಂದ ಸ್ವಸ್ಥನಾಗಿ ನಡೆದಾಡಿದಾಗ ಸಬ್ಬತ್ತನ್ನು ನೆನಪಿಸಲು ಜನರು ಬರುವಂತದ್ದನ್ನು ನಾವು ಕಾಣಬಹುದು. ಮನುಷ್ಯನು ಮಾಡಿಕೊಂಡ ನಿಯಮಗಳು ಇಂದು ಮನುಷ್ಯನು ಸತ್ಯ ದೇವರನ್ನು ತಿಳಿದುಕೊಳ್ಳಲು ಅಡ್ಡಿಮಾಡುವುದನ್ನು ಕಾಣಬಹುದು. ಈತನು 38 ವರ್ಷಗಳ ನಂತರ ನಡೆದಾಡಲು ಆರಂಭಿಸಿದಾಗ ಧಾರ್ಮಿಕ ಜನರಿಗೆ ಎಲ್ಲಿಲ್ಲದ ಪ್ರೀತಿ ಈತನ ಮೇಲೆ ಉಕ್ಕುವಂತದ್ದನ್ನು ಕಾಣಬಹುದು. ನನ್ನ ಸೇವೆ ಅನುಭವದಲ್ಲಿ ಇಂಥ ಅನೇಕ ಸಾಕ್ಷಿಗಳನ್ನು ನಾನು ಕಂಡಿದ್ದೇನೆ. ಮನುಷ್ಯನು ಮಾಡಿಕೊಂಡ ನಿಯಮಗಳು ಮನುಷ್ಯನ ಜೀವಿತವನ್ನು ಬದಲಾಯಿಸಲು ಸಾಧ್ಯವಿಲ್ಲ. ಜೀವವುಳ್ಳ ದೇವರ ವಾಕ್ಯ ಮಾತ್ರ ಮನುಷ್ಯನನ್ನು ಬದಲಾಯಿಸಲು ಸಾಧ್ಯ.

ನನಗೆ ಕರ್ನಾಟಕದಲ್ಲಿ ಒಬ್ಬ ಸ್ನೇಹಿತರು ಗೊತ್ತು. ಅವರು ಕ್ರೈಸ್ತ ಕುಟುಂಬದಲ್ಲಿ ಹುಟ್ಟಿ ಬೆಳೆದವರು, ಅವರು ವೃತ್ತಿಯಲ್ಲಿ ಟೈಲರ್ ಆಗಿದ್ದರು ಮಾತ್ರವಲ್ಲದೆ ಸ್ವಂತ ಟೈಲರ್ ಅಂಗಡಿಯನ್ನು ನಡೆಸುತ್ತಿದ್ದರು. ಸುಮಾರು 4 ಜನ ಅಂಗಡಿಯಲ್ಲಿ ಕೆಲಸಕಿದ್ದರು ಆದರೆ ಇವರು ಬಂದ ಆದಾಯದಲ್ಲಿ ಮದ್ಯಪಾನ ಮಾಡುವುದು ಮತ್ತು ಜೂಜಾಡುವುದಾಗಿತ್ತು. ಸಂಜೆ 7 ಘಂಟೆಗೆ ಅವರು ಅಂಗಡಿ ಮುಚ್ಚಿದರೆ ಮಧ್ಯರಾತ್ರಿ 12,1,2 ಘಂಟೆಗೆ ಮನೆಗೆ ಕುಡಿದು ಮತ್ತರಾಗಿ ಹೋಗುತ್ತಿದ್ದರು. ಮನೆಗೆ ಹೋಗಿ ಮಲಗಿದ್ದ ಹೆಂಡತಿ ಮಕ್ಕಳನ್ನು ಎಬ್ಬಿಸಿ ಹೊಡೆಯುತ್ತಿದ್ದರು, ಹೆಂಡತಿಗೆ ಮನೆ ಖರ್ಚಿಗೆ ಹಣವನ್ನು ನೀಡುತ್ತಿರಲಿಲ್ಲ. ಮಕ್ಕಳು ತಂದೆಯನ್ನು ದೂರದಿಂದ ನೋಡಿದಾಗಲೇ ಹೆದರಿ ನಡುಗುತ್ತಿದ್ದರು. ಎಷ್ಟೋ ಸಾರಿ ಮಕ್ಕಳು ಸೇವಿಸಲು ಆಹಾರವಿಲ್ಲದೆ ಉಪವಾಸದಿಂದಲೇ ಶಾಲೆಗೆ ಹೋಗಬೇಕಾದ ಪರಿಸ್ಥಿತಿ ಇತ್ತು. ಹೆಂಡತಿ ಮಕ್ಕಳನ್ನು ಕೆಟ್ಟಕೆಟ್ಟದ್ದಾಗಿ ಬೈಯ್ಯುತ್ತಿದ್ದರು. ಈ ಸಹೋದರ ವಿಪರೀತ ಸಾಲ ಮಾಡಿಕೊಂಡಿದ್ದರ ನಿಮಿತ್ತ ಸಾಲಗಾರರು ಹಣವನ್ನು ಕೇಳಲು ಆರಂಭಿಸಿದರು. ಇತ್ತ ಮನೆಯಲ್ಲಿ, ಅಂಗಡಿಯಲ್ಲಿ ಇರಲಿಕ್ಕೆ ಸಾಧ್ಯವಾಗದ ಪರಿಸ್ಥಿತಿ ಬಂತು. ಒಂದು ದಿನ ಆತ್ಮಹತ್ಯೆ ಮಾಡಿಕೊಂಡು ಸಾಯುವ ನಿರ್ಧಾರಕ್ಕೆ ಬಂದು ಬಿಟ್ಟರು. ಅದೇ ದಿನ ರಕ್ಷಣೆಹೊಂದಿದ ಒಬ್ಬ ಸಹೋದರ ಅವರಿಗೆ

ನನ್ನ ಆಜ್ಞೆಗಳನ್ನು ಮನಃಪೂರ್ವಕವಾಗಿ ನಡಿಸು (ಜ್ಞಾನೋ. ೩:1).

ಸಿಕ್ಕಿದ ಮಾತ್ರವಲ್ಲದೆ ಇವರಿಗೆ ಸುವಾರ್ತೆ ಹೇಳಲು ಆರಂಭಿಸಿದ. ಇವರ ಕಣ್ಣಲ್ಲಿ ಕಣ್ಣೀರು ಬಂತು. ಆ ಸಹೋದರರ ಈ ಸಹೋದರಿಗಾಗಿ ಭಾರದಿಂದಲೂ, ಕಣ್ಣೀರಿನಿಂದಲೂ ಪ್ರಾರ್ಥಿಸಿದರು. ಇವರಲ್ಲಿದ್ದ ಹಿಂಸೆ, ವೇದನೆ, ಭಯ ಮಾತ್ರವಲ್ಲದೆ ಆತ್ಮಹತ್ಯೆ ಮಾಡಬೇಕೆಂಬ ಯೋಚನೆ ಕೂಡ ಹೊರಟು ಹೋಯಿತು. ಅವತ್ತು ಇವರು ಕರ್ತನಾದ ಯೇಸುವನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡರು. ಅವತ್ತಿನಿಂದ ಸತ್ಯವೇದ ಓದಲು ಆರಂಭಿಸಿದರು, ಪ್ರಾರ್ಥನೆ ಮಾಡಲು ಆರಂಭಿಸಿದರು, ಪ್ರತಿ ಭಾನುವಾರ ಅವರಿಗೆ ಸುವಾರ್ತೆ ಸಾರಿದ ಸಹೋದರ ಹೋಗುವಂತಹ ಸಭೆಗೆ ಆರಾಧನೆಗೆ ಹೋಗಲು ಆರಂಭಿಸಿದರು. ಸ್ವಲ್ಪ ದಿನದಲ್ಲಿ ನೀರಿನಲ್ಲಿ ಮುಳುಗಿ ತಂದೆ, ಮಗ, ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಂಡರು. ಹೀಗೆ ಸುಮಾರು ಮೂರು ವಾರ ಕಳೆಯಿತು. ಈಗ ಇವರ ಮನೆಯಲ್ಲಿ ಬದಲಾವಣೆಯುಂಟಾಗಿದೆ ಎಲ್ಲರಿಗೂ ಮರ್ಯಾದೆ ಕೊಡುತ್ತಿದ್ದಾರೆ, ಹೆಂಡತಿ ಮಕ್ಕಳ ಜೊತೆಯೂ ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದಾರೆ, ಹೆಂಡತಿ ಮಕ್ಕಳ ಜೊತೆಯು ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದಾರೆ, ಹೆಂಡತಿಗೆ ಮನೆ ಖರ್ಚಿಗೆ ಹಣಕೊಡುತ್ತಿದ್ದಾರೆ, ಸಂಜೆ 7 ಘಂಟೆಗೆ ಅಂಗಡಿ ಮುಚ್ಚಿದರೆ ಸಂಜೆ 7.30ಕ್ಕೆ ಮನೆಗೆ ಮುಟ್ಟುತ್ತಾರೆ, ಕುಡುಕತನ, ಜೂಜು ಎಲ್ಲವನ್ನು ಬಿಟ್ಟಿದ್ದಾರೆ. ಈ ಎಲ್ಲಾ ಬದಲಾವಣೆ ಹೆಂಡತಿಗೆ ತಿಳಿಯಿತು. 3 ವಾರಗಳ ನಂತ ಹೆಂಡತಿ ಆಶ್ಚರ್ಯಚಕಿತಳಾಗಿ ಗಂಡನಿಗೆ ಈ ಎಲ್ಲಾ ಬದಲಾವಣೆಗೆ ಕಾರಣ ಕೇಳುತ್ತಿದ್ದಾಳೆ. ಆಗ ಹಿಂದಿನ ದಿನಗಳಲ್ಲಿ ನಡೆದ ಎಲ್ಲಾ ಘಟನೆಗಳ ಬಗ್ಗೆ ಗಂಡನು ಹೆಂಡತಿಗೆ ವಿವರಿಸಿದನು. ಹೆಂಡತಿಗೆ ಆಶ್ಚರ್ಯವೂ, ಸಂತೋಷವೂ ಆಯಿತು. ಹೆಂಡತಿ ಗಂಡನಿಗೆ ಹೇಳಿದಳು ನಿಮ್ಮ ಜೀವನ ಏನು ಅಂಥ ನಾನು ಕಣ್ಣಾರೆ ಕಂಡು ಅನುಭವಿಸಿದವಳು. ಕ್ರೈಸ್ತ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಯಾವುದು ನಿಮ್ಮನ್ನು ಬದಲಾವಣೆ ಮಾಡಲು ಸಾಧ್ಯವಾಗಲಿಲ್ಲ. ಸುವಾರ್ತೆಯನ್ನು ಕೇಳಿ ಕರ್ತನಾದ ಯೇಸುವನ್ನು ರಕ್ಷಕನೂ ಒಡೆಯನಾಗಿ ಸ್ವೀಕರಿಸಿದ್ದರಿಂದ ನಿಮ್ಮ ಜೀವನ ಬದಲಾಗಿದೆ ನಾನು ಕೂಡ ಮಕ್ಕಳ ಜೊತೆಯಲ್ಲಿ ನಿಮ್ಮೊಂದಿಗೆ ಇನ್ನು ಮುಂದೆ ಆರಾಧನೆಗೆ ಬರುತ್ತೇನೆಂದು ಹೇಳಿದಳು. ಸ್ವಲ್ಪ ದಿವಸಗಳ ನಂತರ ಹೆಂಡತಿ ಕೂಡ ದೀಕ್ಷಾಸ್ನಾನ ತೆಗೆದುಕೊಂಡರು.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**




# ನಮ್ಮೊಂದಿಗೆ ಆಚರಿಸಿ



**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ (ಕೀರ್ತ. 34:15).

# ಜಯದ ಜೀವಿತ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನಾವು ಯಾವಾಗಲೂ ಹಿಂತಿರುಗಿ ಬಂದು ತಂದೆಯ ಬಳಿ ಅನ್ಯೋನ್ಯತೆಯಲ್ಲಿರಬೇಕು. ಹಳೇಯದನ್ನು ಬಿಟ್ಟು ಕರ್ತನಲ್ಲಿ ಒಂದಾಗ ಬೇಕಾಗಿದೆ. **"ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವುದಕ್ಕೆ ಎದೆ ಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿ ಮಾಡಿಕೊಂಡು ಓಡುತ್ತಾ ಇದ್ದೇನೆ"** (ಫಿಲಿ. 3:13–14).

ಕುರುಡ ಬಾರ್ತಿಮಯನು ನಂಬಿಕೆಯಿಂದಲೇ ಹಳೇ ಹೊದಿಕೆಯನ್ನು ತೆಗೆದು ಹಾಕಿದ ವೇಳೆಯಲ್ಲಿ ಯೇಸು ಅವನಿಗೆ ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥಮಾಡಿದೆ ಅಂದರು. (ಮಾರ್ಕ. 10:50). ಪ್ರಿಯನೇ ನಿನ್ನಲ್ಲಿ ನಂಬಿಕೆಯ ಕೊರತೆಯುಂಟಾದರೆ ನೀನು ಸೈತಾನನನ್ನು ಎದುರಿಸಲು ಅಸಾಧ್ಯ. **"ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ"** (1 ಪೇತ್ರ. 5:9). ಕರ್ತನು ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸುವಾತನು ಹಾಗೂ ಪೂರೈಸುವಾತನು ಆಗಿದ್ದಾನೆ (ಇಬ್ರಿ. 12:2). ಆದರೆ ಸೈತಾನನು ಅಪನಂಬಿಕೆಯ ಅಗ್ನಿ ಬಾಣಗಳನ್ನು ಕಳಿಸಿ ನಮ್ಮನ್ನು ಕೆಡವಲು ಪ್ರಯತ್ನಿಸುವನು. ಸತ್ಯವೇದ ಹೇಳುತ್ತದೆ, **"ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ ಅದರಿಂದ ನೀವು ಕೆಡುಕನ ಅಗ್ನಿ ಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ"** (ಎಫೆ. 6:16). ಗುರಾಣಿಯು ಎದುರಾಳಿಯ ಕತ್ತಿ ಬಾಣಗಳನ್ನು ತಡೆಯುವ ಶಕ್ತಿಯುಳ್ಳ ಒಂದು ಆಯುಧ ವಿರೋಧಿಯಾದ ಸೈತಾನನು ಅಪನಂಬಿಕೆಯಿಂದ ಕೂಡಿದ ಬಾಣ, ಕತ್ತಿಗಳನ್ನು ಎಸೆಯುವಾಗ ನಂಬಿಕೆಯೆಂಬ ಅಂದರೆ ಬಲವಾದ ನಂಬಿಕೆಯೆಂಬ ಗುರಾಣಿ ಹಿಡಿಯುವುದಾದರೆ ಆತನ ಬಾಣಗಳು ನಿನ್ನೊಳಗೆ ಪ್ರವೇಶಿಸಲಾರದು, ಅವು ನಿಷ್ಫಲವಾಗುವದು. ದೇವ ಮಗುವೆ, ನಿನ್ನ ಸ್ವಬಲದಿಂದ ನಿನ್ನ ಸಾಮರ್ಥ್ಯದಿಂದ ಕರ್ತನಲ್ಲಿ ನೀನು ನಿಲ್ಲಲು ಆಗುವುದಿಲ್ಲ. ನಾನು ನಿಂತಿದ್ದೇನೆಂದು ನೆನೆಸಿಕೊಳ್ಳುವವನು ಬೀಳದಂತೆ ಎಚ್ಚರಿಕೆ ವಹಿಸಲಿ ಎಂದು ದೇವರ ವಾಕ್ಯ ತಿಳಿಸುತ್ತದೆ (1ಕೊರಿ. 10:12) ಆದರೆ ದೇವರ ಬಲವನ್ನು, ಕೃಪೆಯನ್ನು ಆತುಕೊಂಡು ಜೀವಿಸುವುದಾದರೆ ನಾವು ನಿಲ್ಲಲು ಸಾಧ್ಯ. **"ನನ್ನ ಕಾಲು ಜಾರಿತೆಂದು ಅಂದಾಗಲೇ ನಿನ್ನ ಕೃಪೆಯು ನನಗೆ ಆಧಾರವಾಯಿತು"** (ಕೀರ್ತ. 94:18).

ಕ್ರಿಸ್ತೀಯ ಜೀವಿತ ನಾವು ಆರಿಸಿಕೊಳ್ಳುವುದರಿಂದ ಅಥವಾ ಉದ್ವೇಗದಿಂದ ಜೀವಿಸುವ ಜೀವಿತವಲ್ಲ ಬದಲಾಗಿ ನಂಬಿಕೆಯಿಂದ ಜೀವಿಸುವ ಜೀವಿತವಾಗಿದೆ. **"ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು"** (ಇಬ್ರಿ. 10:38). ನಾನು ಇತರರಿಗಿಂತ ಶ್ರೇಷ್ಟನು ಎಂಬ ಧೋರಣೆಯಿಂದ ಜೀವಿಸುವ ಜೀವಿತ ಜಯದ ಜೀವಿತಕ್ಕೆ ಅಡ್ಡಿಯಾಗುವದು. **"ಅಂತು ಜನರು ನಿಮಗೆ ಏನು ಮಾಡಬೇಕೆಂದು ಅಪೇಕ್ಷಿಸುತ್ತಾರೋ ಅದನ್ನೇ ನೀವು ಅವರಿಗೆ ಮಾಡಿರಿ"** (ಮತ್ತಾ. 7:12). ಇನ್ನೊಬ್ಬರ ವಿಷಯದಲ್ಲಿ ಕಹಿ, ದ್ವೇಷವನ್ನಿಟ್ಟುಕೊಂಡು ಜಯದ ಜೀವಿತ ಜೀವಿಸಲು ಸಾಧ್ಯವಿಲ್ಲ. ನಮ್ಮಲ್ಲಿರುವ ಕಹಿ, ದ್ವೇಷ, ಪ್ರೀತಿ, ಸಮಾಧಾನವಾಗಿ ಮಾರ್ಪಾಟ್ಟಾಗಲೇ ಇತರರು ನನಗಿಂತ ಶ್ರೇಷ್ಟರು ಎಂಬ ಭಾವನೆ ಬರುವುದು. ಈ ದಿನಮಾನಗಳಲ್ಲಿ ಸೈತಾನನು ಸಭೆಗಳಲ್ಲಿ ಒಬ್ಬರಿಗೊಬ್ಬರಲ್ಲಿ ಕಹಿ, ಭಿನ್ನಮತ, ಹೊಟ್ಟೆಕಿಚ್ಚುಗಳನ್ನು ತಂದು ಹಾಕಿ ಸಭೆಯ ಅನ್ಯೋನ್ಯತೆಗೆ ಅಡ್ಡಿಯಾಗುತ್ತಾನೆ. "ಆದರೆ ಜನರು ನಿದ್ರೆ ಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋದಿಯ ನಡುವೆ ಹಣಜಿ ಬಿತ್ತಿ ಹೋದನು" (ಮತ್ತಾ. 13:25). ಸಭೆಯಲ್ಲಿ ಉತ್ತಮ ಬೆಳೆಗೆ ತಡೆಯಾಗಿ ಹಣಜಿಯನ್ನು ಬಿತ್ತಿ ಬೆಳೆಯನ್ನು ತಡೆಯುವುದು ನೋಡುತ್ತಾನೆ. ಆದರೆ ಜನರು ಆತ್ಮೀಕವಾಗಿ ನಿದ್ರೆ ಮಾಡದೆ ಎಚ್ಚರಿಕೆ ವಹಿಸಿದರೆ ಆತನ ಪ್ರಯತ್ನ ಸಫಲವಾಗದು.

**ವಿಯುಸ್ಕರ ಸ್ವರ**

ಪ್ರಿಯ ದೇವ ಮಗುವೆ ನೀನು ಸೋತವನಲ್ಲ, ಸೋತವಳಲ್ಲ. ಎಲ್ಲವನ್ನು ಜಯಿಸಿದ ಕರ್ತನು ನಿನ್ನೊಳಗೆ ಇರುವನು. ಮನಗುಂದಿ ಹೋಗಬೇಡಾ ಆತನನ್ನು ನಂಬು, ನಿರೀಕ್ಷಿಸು ನೀನು ಖಂಡಿತವಾಗಿಯೂ ಜಯಶಾಲಿಯಾಗುವಿ. **"ದು:ಖಪಡುವವ ರಾಗಿದ್ದರೂ ಯಾವಾಗಲು ಸಂತೋಷ ಪಡುವವರು, ಬಡವರಾಗಿದ್ದರೂ, ಅನೇಕರಿಗೆ ಐಶ್ವರ್ಯವನ್ನುಂಟು ಮಾಡುವವರು, ಏನೂ ಇಲ್ಲದವರಾಗಿದ್ದರೂ ಎಲ್ಲಾ ಇದ್ದವರೂ ಆಗಿದ್ದೇವೆ"** (2 ಕೊರಿ. 6:10). ಬಾಯ ಮಾತುಗಳಿಂದ ಸೈತಾನನಿಗೆ ಅವಕಾಶ ಕೊಡಬೇಡಾ. ಅನೇಕರು ಯಾವಾಗಲೂ ಅಪನಂಬಿಕೆಯ, ಕೊರತೆಯ ಮಾತುಗಳನ್ನಾಡಿ ಸೋತು ಸೊರಗಿ ಹೋಗುವರು. ವಿಶ್ವಾಸದ ಅರಿಕೆಗಳನ್ನು ಮಾಡಿ ಜಯವನ್ನು ಹೊಂದಿಕೋ. ಪೌಲನು ಬರೆಯುತ್ತಾನೆ, **"ಹೀಗಿದ್ದರೂ ನಂಬಿದೆನು, ಆದದರಿಂದ ಮಾತಾಡಿದೆನು ಎಂಬ ಶಾಸ್ತ್ರೋಕ್ತಿಯಲ್ಲಿ ಕಾಣುವ ನಂಬಿಕೆಯ ಭಾವವನ್ನೇ ಹೊಂದಿ ನಾವೂ ನಂಬಿದವರು, ಆದದರಿಂದ ಮಾತಾಡುತ್ತೇವೆ"** (2 ಕೊರಿ. 4:13).

ಪ್ರಿಯ ದೇವ ಮಗುವೇ, ನಿನ್ನ ಒಳಗಿರುವವನಾದ ಕರ್ತ ಆತನು ಎಂದಿಗೂ ಸೋತವನಲ್ಲ, ಎಲ್ಲವನ್ನು ಜಯಿಸಿದವನು. ಆತನು ನಿನ್ನೊಳಗೆ ಇರುವವರೆಗೆ ನೀನು ಎಂದಿಗೂ ಸೋತವನಲ್ಲ, ಜಯ ಹೊಂದಿದವನು ಜಯದ ಹೆಜ್ಜೆ ಹಾಕುವವನು ಆಗಿದ್ದೀ. ದೇವರು ನಿನ್ನನ್ನು ಆಶೀರ್ವದಿಸಿ ಈ ವರ್ಷವೆಲ್ಲಾ ಜಯದ ಜೀವಿತ ಜೀವಿಸುವಂತೆ ಕೃಪೆ ಕೊಡಲಿ.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

ಯೆಹೋವನೆಂಬ ನಾನು ನಿನ್ನ ದೇವರಾಗಿದ್ದೇನೆ (ಯೆಶಾ. 43:3).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 00720102575**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
**ಸಂಪಾದಕರು, 'ದೇವರ ಸ್ವರ', ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) **ದೇವಕುಲವು ಅನ್ಯ ಕುಲದೊಡನೆ ಮಿಶ್ರವಾಗದಿರಲು ತಮಗೂ ತಮ್ಮ ಮಕ್ಕಳಿಗೂ ಅವರಿಂದ ಹೆಣ್ಣುಗಳನ್ನು ತೆಗೆದುಕೊಂಡದ್ದರಿಂದ 'ದೇವಕುಲವು ಅನ್ಯದೇಶಗಳವರೊಡನೆ ಮಿಶ್ರವಾಯಿತು. ಪ್ರಭುಗಳೂ ಪ್ರಧಾನರೂ ಈ ದ್ರೋಹಕ್ಕೆ ಮುಂದಾಳುಗಳಾದರು ಎಂದು ತಿಳಿಸಿದರು"** (ಎಜ್ರ.9:1–2).

5) **ಅನ್ಯರು ದೇವಜನರನ್ನು ಪಾಪಕ್ಕೆ ಪ್ರೇರೆಪಿಸಿ ಬೀಳಿಸದೆ ಇರುವುದಕ್ಕಾಗಿ :–** (ನೆಹೆ. 13:23–27). ಅಂಥ ಸ್ತ್ರೀಯರ ದೆಸೆಯಿಂದ ಇಸ್ರಾಯೇಲ್ ರಾಜನಾದ ಸೊಲೊಮೋನನು ದೋಷಿಯಾದನಲ್ಲವೇ ಅನೇಕನೇಕಾ ಜನಾಂಗಗಳಲ್ಲಿ ಅವನಿಗೆ ಸಮಾನನಾದ ಅರಸನು ಇರಲಿಲ್ಲ. ಅವನು ತನ್ನ ದೇವರಿಗೆ ವಿಶೇಷ ಪ್ರಿಯನು ಆದುದರಿಂದ ದೇವರು ಅವನನ್ನು ಎಲ್ಲಾ ಇಸ್ರಾಯೇಲ್ಯರ ಮೇಲೆ ಅರಸನನ್ನಾಗಿ ನೇಮಿಸಿದನು ಆದರೂ ಅನ್ಯದೇಶ ಸ್ತ್ರೀಯರು ಪಾಪದಲ್ಲಿ ಬೀಳಿಸಿದರು.

6) **ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಇಜೋಡಾಗದಿರಲು** (2 ಕೊರಿ. 6:14)

7) **ಪರಿಶುದ್ಧವಾಗಿ ಜೀವಿಸಬೇಕಾಗಿರುವುದರಿಂದ** (2 ಕೊರಿ. 6:14–18, 7:1)

8) **ದೇವರನ್ನೇ ಹೊಂದಿಕೊಂಡಿರುವುದಕ್ಕೋಸ್ಕರ** (ಯೆಹೋ. 23:8).

9) **ಅನ್ಯರು ನಂಬಿಕೆಯಲ್ಲಿ ಬೆಳೆಯಲು ಉರುಲು ಬೋನು ಆಗದೇ ಇರುವುದಕ್ಕೋಸ್ಕರ** (ಯೆಹೋ. 23:11–13).

3) **ದಾಂಪತ್ಯ ಜೀವಿತವನ್ನು ನಡೆಸುವ ಜ್ಞಾನವನ್ನು ಕರ್ತನಿಂದ ಕೇಳಿ ಹೊಂದಿಕೋ :–** ಮದುವೆಯಾದಂತಹ ದೇವಜನರು ನಿಮ್ಮ ದಾಂಪತ್ಯ ಜೀವಿತ ಆಶೀರ್ವಾದ ಹೊಂದಬೇಕಾದರೆ ನೀವು ಮಾಡಬೇಕಾದ ಕೆಲವು ಸಂಗತಿಗಳಿವೆ.

1) ಪರಸ್ಪರ ಕ್ಷಮಿಸಬೇಕು
2) ಪರಸ್ಪರ ಪ್ರೋತ್ಸಾಹಿಸಬೇಕು
3) ಪರಸ್ಪರ ಪ್ರೀತಿಸಬೇಕು
4) ಪರಸ್ಪರ ಹೊಗಳಬೇಕು
5) ಪರಸ್ಪರ ಪ್ರಾರ್ಥಿಸಬೇಕು
6) ಪರಸ್ಪರ ನಂಬಿಗಸ್ತರಾಗಿರಬೇಕು
7) ಪರಸ್ಪರ ಅಧೀನಪಡಿಸಿಕೊಳ್ಳಬೇಕು

## ಮಹಿಳೆಯರ ಸ್ವರ

1) **ಕ್ರೈಸ್ತ ವಿಶ್ವಾಸಿಗಳು ಪ್ರೀತಿಸಿ ಮದುವೆಯಾಗಬಾರದು :–** (ಪರಮ. 2:7) **"ಯೆರೂಸಲೇಮಿನ ಸ್ತ್ರೀಯರೇ, ಉಚಿತ ಕಾಲಕ್ಕೆ ಮುಂಚೆ ಪ್ರೀತಿಯನ್ನು ಹುಟ್ಟಿಸಿ ಬೆಳೆಯಿಸಬಾರದೆಂದು ಅಡವಿಯ ಹುಲ್ಲೆಗಳ ಮೇಲೆಯೂ ಹರಿಣಿಗಳ ಮೇಲೆಯೂ ನಿಮ್ಮಿಂದ ಪ್ರಮಾಣಮಾಡಿಸುತ್ತೇನೆ".** ಅನೇಕ ಸಭೆಗಳಲ್ಲಿ ಯೌವನಸ್ಥರು ತಮಗೆ ಬೇಕಾದ ರೀತಿಯಲ್ಲಿ ಪ್ರೀತಿಸಿ ಮದುವೆಯಾಗುವುದನ್ನು ಕಾಣುತ್ತೇವೆ. ಉಚಿತಕಾಲ ಎಂದರೇನು? ಅದು ಮದುವೆಯಾಗಿದೆ (ಪರಮ.3:5, 8:4).

2) **ಕ್ರೈಸ್ತ ವಿಶ್ವಾಸಿಗಳು ಒಂದೇ ಜಾತಿಯ ಲಿಂಗದೊಟ್ಟಿಗೆ ಮದುವೆಯಾಗಬಾರದು :– "ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗಗಳನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಭಾವಿಕವಾದ ಸ್ತ್ರೀ ಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣ ವಾದದ್ದನ್ನು ನಡಿಸಿ ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ಹೊಂದುವವರಾದರು"** (ರೋಮ. 1:26–27).

ಇಂದು ಲೋಕದಲ್ಲಿ ಪುರುಷರು – ಪುರುಷರು ಹಾಗೂ ಸ್ತ್ರೀಯರು –ಸ್ತ್ರೀಯರು ಮದುವೆಯಾಗುವುದು ಕಾನೂನು ಬದ್ಧವಾಗಿದೆ ಅದಕ್ಕೆ ಕಾನೂನು ಕೂಡ ಇವತ್ತು ಒಪ್ಪಿಗೆ ಕೊಡುವುದನ್ನು ಕಾಣಬಹುದು. ಆದರೆ ದೇವರ ವಾಕ್ಯ ಇಂಥ ಮದುವೆಗೆ ವಿರೋಧವಾಗಿದೆ.

ದೇವರು ಆದಿಯಲ್ಲಿ ಪುರುಷ ಹಾಗೂ ಸ್ತ್ರೀಯನ್ನು ಉಂಟು ಮಾಡಿದರು. ಇಬ್ರಿ. 13:3 ಪ್ರಕಾರ ದಾಂಪತ್ಯವು ಎಲ್ಲಕ್ಕಿಂತ ಮಾನ್ಯವಾದದ್ದು. ಮದುವೆಯನ್ನು ಹಗುರವಾಗಿ ಭಾವಿಸಬಾರದು, ದು:ಖಕರ ಸಂಗತಿ ಏನೆಂದರೆ ಇಂದು ಮನುಷ್ಯನು ದೇವರ ವಾಕ್ಯಕ್ಕೆ ವಿರುದ್ಧವಾಗಿ ಹೋಗುವಂತದ್ದನ್ನು ಕಾಣಬಹುದು.

3) **ಕ್ರೈಸ್ತ ವಿಶ್ವಾಸಿಗಳು ವಿವಾಹ ವಿಚ್ಛೇದನೆ ಮಾಡಬಾರದು :–** ಇಂದು ಕ್ರೈಸ್ತ ಸಭೆಗಳಲ್ಲಿ ವಿವಾಹ ವಿಚ್ಛೇದನಾ ಸಾಮಾನ್ಯವಾಗಿ ಬಿಟ್ಟಿದೆ. ವಿವಾಹ ವಿಚ್ಛೇದನೆಯನ್ನು ದೇವರು

ಹಗೆ ಮಾಡುತ್ತಾನೆ. ಪರಮಾತ್ಮನಾದ ಯಾವನೂ ಹೀಗೆ ಮಾಡಲಿಲ್ಲ. ಆ ಪ್ರಸಿದ್ಧನೊಬ್ಬನು ಏಕೆ ಇಂಥ ಕೃತ್ಯ ಮಾಡಿದನು? ದೇವರ ವರವಾದ ಸಂತಾನವನ್ನು ಹಾರೈಸಿಯೇ ಹೀಗಿರಲು ನಿಮ್ಮ ಆತ್ಮವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿರಿ. ಯಾವನೂ ತನ್ನ ಯೌವ್ವನದ ಪತ್ನಿಗೆ ದ್ರೋಹ ಮಾಡದಿರಲಿ ಇಸ್ರಾಯೇಲಿನ ದೇವರಾದ ಯೆಹೋವನು ಇಂತೆನ್ನುತ್ತಾನೆ, ನಾನು ಪತ್ನಿ ತ್ಯಾಗವನ್ನು ಹೆಂಡತಿಗೆ ಅನ್ಯಾಯ ಮಾಡುವವನನ್ನು ಹಗೆಮಾಡುತ್ತೇನೆ ಇದು ಸೇನಾಧೀಶ್ವರ ಯೆಹೋವನ ನುಡಿ. ಆದಕಾರಣ ನಿಮ್ಮ ಆತ್ಮವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿರಿ ದ್ರೋಹಮಾಡಬೇಡಿರಿ. ಸತ್ಯವೇದದಲ್ಲಿ ಇಷ್ಟೆಲ್ಲಾ ದೇವರ ವಾಕ್ಯಗಳಿದ್ದು, ಅನೇಕರು ಯಾಕೆ ಎಡವಿ ಬೀಳುತ್ತಾರೆ ಗೊತ್ತಾಗುವುದಿಲ್ಲ. ಮದುವೆ ಎಂಬುವಂತದ್ದು ಅದು ಪರಲೋಕದ ದೇವರು ಸ್ಥಾಪಿಸಿದ್ದ ಪರಿಶುದ್ಧವಾದ ಸಂಸ್ಕಾರವಾಗಿದೆ. ಒಬ್ಬಂಟಿಗರನ್ನು ಸಂಸಾರಿಕರನಾಗಿ ಮಾಡುತ್ತಾನೆ (ಕೀರ್ತ. 68:6). ಮನುಷ್ಯನು ಒಂಟಿಗನಾಗಿರುವುದು ಸರಿಯಲ್ಲ ಅವನಿಗೆ ಸರಿಬೀಳುವಂತಹ ಸಹಕಾರಿಯನ್ನು ಉಂಟುಮಾಡುವೆನು (ಆದಿ. 2:18). ಆದಕಾರಣ ಮದುವೆಯನ್ನು ಪರಿಶುದ್ಧ ಸಂಸ್ಕಾರವಾಗಿ ನಾವು ಸ್ವೀಕರಿಸತಕ್ಕದ್ದು. ದಾಂಪತ್ಯವು ಎಲ್ಲಕ್ಕಿಂತ ಮಾನ್ಯವಾದದ್ದು ಎಂದು ಎಣಿಸಬೇಕು. (ಇಬ್ರಿ. 13:3). ಮದುವೆಯನ್ನು ನಾವು ಗೌರವಾಯುತವಾಗಿ ಕಾಣಬೇಕು. ಐರೋಪ್ಯ ರಾಷ್ಟ್ರಗಳಲ್ಲಿ ಇಂದು ಅನೇಕ ಗಂಡು, ಹೆಣ್ಣು ಮಕ್ಕಳು ಮದುವೆಗಿಂತ ಮುಂಚೆ 6 ತಿಂಗಳು, 1 ವರ್ಷ ಒಟ್ಟಿಗೆ ಜೀವನ ಮಾಡಿ ಇಷ್ಟ ಇಲ್ಲದಿದ್ದರೆ ಬೇರೆಯವರನ್ನು ನೋಡುತ್ತಾರೆ. ಇನ್ನು ಅನೇಕರು ಒಪ್ಪಂದದ ಮದುವೆಗಳನ್ನು ಮಾಡಿಕೊಳ್ಳುತ್ತಾರೆ. ಇವೆಲ್ಲಾ ದೇವರ ವಾಕ್ಯಕ್ಕೆ ವಿರುದ್ಧವಾದದ್ದು. ನೋಹನ ಕಾಲದಲ್ಲಿ ಪಾಪವು ಹೆಚ್ಚಾದಾಗ ದೇವರು ಮನುಷ್ಯನನ್ನು ಸೃಷ್ಟಿ ಮಾಡಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟನು ಎಂದು ನೋಡುತ್ತೇವೆ. ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನು ಅವರು ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವುದನ್ನು ಯೆಹೋವನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟು ಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು. (ಆದಿ. 6:5–6). ಇಂದು ಕೂಡ ದೇವರು ಕ್ರೈಸ್ತ ಮದುವೆಗಳಲ್ಲಿ ನಡೆಯುವಂಥ ಅಕ್ರಮ, ಅಶಿಸ್ತನ್ನು ನೋಡಿ ದು:ಖಪಡುತ್ತಾನೆ. ಒಂದು ದಿನ ಫರಿಸಾಯರು ಕರ್ತನಾದ ಯೇಸುಕ್ರಿಸ್ತನ ಬಳಿಗೆ ಬಂದು ಒಂದು ಪ್ರಶ್ನೆ ಕೇಳಿದರು. ಮತ್ತಾ. 19:3 ಆಗ ಫರಿಸಾಯರು ಆತನ ಹತ್ತಿರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂಬ ಯೋಚನೆಯಿಂದ ಒಬ್ಬನು ಯಾವುದಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟು ಬಿಡುವುದು ಧರ್ಮವೋ ಹೇಗೆ ಎಂದು ಕೇಳಿದ್ದಕ್ಕೆ ಫರಿಸಾಯರ ಪ್ರಶ್ನೆ ಹೆಂಡತಿಯನ್ನು ಬಿಡುವುದಕ್ಕೆ, ಗಂಡನನ್ನು ಬಿಡುವುದಕ್ಕೆ ಯಾವುದೇ ಒಂದು ಕಾರಣ ಇರಬಹುದು. ವ್ಯಭಿಚಾರ, ಮನಸ್ತಾಪ, ಜಗಳ, ಹಣ, ಅತ್ತೆ ಮಾವನ ಉಪದ್ರವ, ಕುಟುಂಬ ಸಮಸ್ಯೆ ಇತ್ಯಾದಿ ಆದರೆ ಫರಿಸಾಯರ ಪ್ರಶ್ನೆ ಹೆಂಡತಿಯನ್ನು ಬಿಡುವುದು ಧರ್ಮವೋ? ಅಧರ್ಮವೋ ಅದಕ್ಕೆ ಕರ್ತನಾದ ಯೇಸುಕ್ರಿಸ್ತನು ಅವರಿಗೆ ಕೊಟ್ಟಂತಹ ಉತ್ತರವೇನೆಂದರೆ ಮನುಷ್ಯರನ್ನು ನಿರ್ಮಾಣ ಮಾಡಿದವನು ಆದಿಯಿಂದಲೇ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿ ಅವರ ವಿಷಯದಲ್ಲಿ ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು ಅವರಿಬ್ಬರೂ ಒಂದೇ ಶರೀರವಾಗುವರು ಎಂದು ಹೇಳಿದನೆಂಬುದಾಗಿ ನೀವು ಓದಲಿಲ್ಲವೋ ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ, ಒಂದೇ ಶರೀರವಾಗಿದ್ದಾರೆ ಆದುದರಿಂದ ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು ಅಂದನು (ಮತ್ತಾ. 19:4–6). ಆದಿಯಿಂದಲೇ ಒಂದು ಗಂಡು ಹಾಗೂ ಹೆಣ್ಣಿನ ಕುರಿತು ದೇವರಿಗೆ ಒಂದು ಯೋಜನೆ ಇತ್ತು ಎಂದು ಮೇಲಿನ ವಚನಗಳಿಂದ ತಿಳಿದುಕೊಳ್ಳುತ್ತೇವೆ. ಪುರುಷನು ತನ್ನ ತಂದೆ ತಾಯಿಯನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವುದೆಂದರೆ ಒಂದು ಕುಟುಂಬದಲ್ಲಿ ಸದಸ್ಯತನದಿಂದ ಬಿಡುಗಡೆ ಹೊಂದಿ ಇನ್ನೊಂದು ಕುಟುಂಬಕ್ಕೆ ಯಜಮಾನನಾಗುತ್ತಾನೆ. ಅಲ್ಲಿ ತಂದೆ ತಾಯಿಯ ಸಂಬಂಧದಿಂದ ಬಿಡುಗಡೆ ಹೊಂದುವುದು ಎಂದು ಅರ್ಥವಲ್ಲ ಅಥವಾ ತಂದೆ ತಾಯಿಯ ಮೇಲಿರುವ ಜವಾಬ್ದಾರಿಯಿಂದ ಬಿಡುಗಡೆ ಹೊಂದುವುದು ಎಂದು ಅರ್ಥವಲ್ಲ ಕೇವಲ ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಬದಲಾವಣೆ ಬರುವುದು ಎಂದು ಅರ್ಥ. ಹುಟ್ಟಿದಂದಿನಿಂದ ತಂದೆ ತಾಯಿಯ ಕುಟುಂಬದಲ್ಲಿ ಪುರುಷನು ಬೆಳೆದಿರುತ್ತಾನೆ. ತಂದೆ / ತಾಯಿ ಅವನ ಕುಟುಂಬಕ್ಕೆ ಯಜಮಾನರಾಗಿರುತ್ತಾರೆ ಆದರೆ

ಪುರುಷನಿಗೆ ಮದುವೆಯಾಗುವಾಗ ತನ್ನ ತಂದೆ ತಾಯಿಯ ಕುಟುಂಬದಿಂದ (ಸದಸ್ಯ ಸ್ಥಾನದಿಂದ) ಬಿಡುಗಡೆ ಹೊಂದಿ ಇನ್ನೊಂದು ಚಿಕ್ಕದಾದ ಕುಟುಂಬಕ್ಕೆ ಅಸ್ತಿವಾರ ಹಾಕುತ್ತಾನೆ. ಈ ಹೊಸ ಕುಟುಂಬಕ್ಕೆ ಈ ಪುರುಷನೇ ಯಜಮಾನ, ಈತನ ಹೆಂಡತಿಯೇ ಯಜಮಾನಿ. ಈಗ ಚಿಕ್ಕ ಕುಟುಂಬವನ್ನು ನಡೆಸುವವರು ಚಿಕ್ಕದಾಗಿ ಸ್ಥಾಪಿಸಲ್ಪಟ್ಟ ನೂತನ ಕುಟುಂಬದ ಯಜಮಾನ, ಯಜಮಾನಿಯಾದಂತಹ ಪುರುಷ ಹಾಗೂ ಸ್ತ್ರೀಯಾಗಿದ್ದಾರೆ. ಅವರಿಬ್ಬರು ಒಂದೇ ಶರೀರ ಎಂದು ಸತ್ಯವೇದ ಹೇಳುತ್ತದೆ, 1 ಕೊರಿ. 11:3 ಆದರೂ ಒಂದು ಸಂಗತಿಯನ್ನು ನೀವು ತಿಳಿದುಕೊಳ್ಳಬೇಕೆಂದು ನನ್ನ ಇಷ್ಟ ಅದೇನೆಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ. ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರು ಸ್ತ್ರೀಯರಿಲ್ಲದೆ ಪುರುಷರು ಸಂಪೂರ್ಣರಲ್ಲ, ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು. ಆದಕಾರಣ ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು. (1 ಕೊರಿ. 11:11) ಮದುವೆ ಸಂಬಂಧದಲ್ಲಿ ಪುರುಷನನ್ನು, ಸ್ತ್ರೀಯನ್ನು ದೇವರು ಕೂಡಿಸುತ್ತಾನೆ. ಇಂದು ಅನೇಕರು ಬೇರೆ ಬೇರೆ ಕಾರಣಗಳಿಂದ ವಿವಾಹ ವಿಚ್ಛೇದನಾ ಕೊಟ್ಟು ಕುಟುಂಬ ಜೀವಿತದಿಂದ ಅಗಲಿ ಹೋಗುವಂತದ್ದನ್ನು ಕಂಡು ದು:ಖವಾಗುತ್ತದೆ.

**ಇಂದು ಕ್ರೈಸ್ತ ಮದುವೆಗಳು ಮುರಿಯಲು ಕಾರಣಗಳೇನು?**

1) ಒಬ್ಬರಿಗೊಬ್ಬರು ಪ್ರೀತಿ ಮಾಡುವುದಿಲ್ಲ.
2) ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳುವುದಿಲ್ಲ.
3) ಒಬ್ಬರಿಗೊಬ್ಬರು ಕ್ಷಮಿಸುವುದಿಲ್ಲ
4) ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುವುದಿಲ್ಲ
5) ಒಬ್ಬರಿಗೊಬ್ಬರು ಆಶೀರ್ವಾದ ಮಾಡುವುದಿಲ್ಲ
6) ಒಬ್ಬರಿಗೊಬ್ಬರು ಸಹಕರಿಸುವುದಿಲ್ಲ
7) ಒಬ್ಬರಿಗೊಬ್ಬರು ತಪ್ಪು ಹುಡುಕುವುದು
8) ಒಬ್ಬರಿಗೊಬ್ಬರು ನಂಬಿಗಸ್ತರಾಗಿರುವುದಿಲ್ಲ
9) ಒಬ್ಬರಿಗೊಬ್ಬರು ಪ್ರೋತಾಹಿಸುವುದಿಲ್ಲ
10) ಒಬ್ಬರಿಗೊಬ್ಬರು ಪ್ರಾರ್ಥನೆ ಮಾಡುವುದಿಲ್ಲ
11) ಒಬ್ಬರಿಗೊಬ್ಬರು ನಂಬಿಕೆಯಿಡುವುದಿಲ್ಲ (ಸಂಶಯ)
12) ಒಬ್ಬರಿಗೊಬ್ಬರು ಹೊಗಳುವುದಿಲ್ಲ
13) ಒಬ್ಬರಿಗೊಬ್ಬರು ಸಮಯ ತೆಗೆದುಕೊಳ್ಳುವುದಿಲ್ಲ
14) ಒಬ್ಬರಿಗೊಬ್ಬರು ಹೃದಯ ತೆರೆಯುವುದಿಲ್ಲ
15) ಮೂರನೆಯ ವ್ಯಕ್ತಿಯ ಬಳಿ ತಮ್ಮ ಸಂಗಾತಿಯ ವಿಷಯಗಳನ್ನು ಹಂಚುವುದು
16) ಮೂರನೆಯ ವ್ಯಕ್ತಿ ಅವರ ಕುಟುಂಬವನ್ನು ಆಳಲು ಅವಕಾಶಕೊಡುವುದು (ತಂದೆ–ತಾಯಿ, ಅತ್ತೆ–ಮಾವ, ನಾದಿನಿ ಇತ್ಯಾದಿ).
17) ಒಬ್ಬರಿಗೊಬ್ಬರು ಗೌರವಿಸುವುದಿಲ್ಲ
18) ಮದುವೆಯ ಹೊರಗೆ ಅಕ್ರಮ ಸಂಬಂಧಗಳು
19) ದೂರದರ್ಶನ, ಕಂಪ್ಯೂಟರ್, ಇಂಟರ್‌ನೆಟ್‌ಗಳ ಮೂಲಕ ತಪ್ಪಾದ ನಡೆಸುವಿಕೆ.
20) ದೇವರ ವಾಕ್ಯದ ಅಜ್ಞಾನ
21) ಪರಸ್ಪರ ತಪ್ಪು ಹೊರಿಸುವುದು
22) ಮನೆಯಲ್ಲಿ ಪ್ರಾರ್ಥನೆಗೂ, ದೇವರ ವಾಕ್ಯಕ್ಕೂ ಅವಕಾಶವಿಲ್ಲ.
23) ದೈವೀಕವಾಗಿ ಮಾರ್ಗದರ್ಶನ ಮಾಡುವಂತಹ ಸೇವಕರ ಸಲಹೆ, ದೇವರ ವಾಕ್ಯದ ಮಾರ್ಗದರ್ಶನವನ್ನು ತಿರಸ್ಕರಿಸುವುದು.
24) ತಮ್ಮ ಸ್ನೇಹಿತರಿಂದಲೂ ಕುಟುಂಬದವರಿಂದಲೂ ಸಿಗುವಂತಹ ಪ್ರೋತ್ಸಾಹ (ವಿವಾಹ ವಿಚ್ಛೇದನಕ್ಕೆ)
25) ದೇವರ ವಾಕ್ಯದ ಪ್ರಕಾರ ಕುಟುಂಬದ ಯಜಮಾನ ಪುರುಷನಾಗಿದ್ದಾನೆ ಆದರೆ ಸ್ತ್ರೀಯಾದವಳು ತನ್ನ ಗಂಡನಿಗೆ ಅಧೀನಳಾಗದೆ ತನ್ನ ಗಂಡನನ್ನು ತನಗೆ ಅಧೀನಪಡಿಸಲು ಪ್ರಯತ್ನಿಸುವುದು.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ1ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಿಮ್ಮ ಪ್ರಯತ್ನಕ್ಕೆ ಫಲ ತಪ್ಪದು (2 ಪೂರ್ವ. 15:7).



## ಮಕ್ಕಳ ಸ್ವರ

1) ಯೆಹೋವನ ________ ಅನುಸರಿಸಿ ಸದಾಚಾರಿಗಳಾಗಿ ನಡೆಯುವವರು ಧನ್ಯರು (ಕೀರ್ತ.119:1).

2) ಸಂಪೂರ್ಣ ಮನಸ್ಸಿನಿಂದ ಆತನನ್ನು ಹುಡುಕುವವರು ____________ (ಕೀರ್ತ. 119:2).

3) ನಿನ್ನ ನೇಮಗಳನ್ನು ____________ಕೈಕೊಂಡು ನಡಿಸಬೇಕೆಂದು ನೀನೇ ಆಜ್ಞಾಪಿಸಿರುತ್ತೀ (ಕೀರ್ತ. 119:4).

4) ನಿನ್ನ ನಿಬಂಧನೆಗಳನ್ನು ಕೈಕೊಳ್ಳುವುದರಲ್ಲಿ ನಾನು ಏನಾಗಿದ್ದರೆ ಒಳ್ಳೇದು? (ಕೀರ್ತ. 119:5).

5) ನಿನ್ನ ಆಜ್ಞೆಗಳನ್ನೆಲ್ಲಾ ಲಕ್ಷಿಸುವವನಾದರೆ ____________ (ಕೀರ್ತ. 119:6).

6) ನಿನ್ನನ್ನು ಯಥಾರ್ಥಹೃದಯದಿಂದ ____________ ಹೋಗುವೆನು (ಕೀರ್ತ. 119:7).

7) ನಿನ್ನ ನಿಬಂಧನೆಗಳನ್ನು ಅನುಸರಿಸುವ ನನ್ನನ್ನು __________ ಕೈಬಿಡಬೇಡ (ಕೀರ್ತ. 119:8).

8) ನಿನ್ನ __________ ರಕ್ಷಣೆಯುಂಟಾಗಲಿ (ಕೀರ್ತ. 119:41).

9) ಯಾವುದನ್ನು ನನಗೆ ದೂರ ಮಾಡು? (ಕೀರ್ತ. 119:29).

10) ನೀನು ನನ್ನ ಯಾವುದನ್ನು ಬಿಡುಗಡೆ ಮಾಡು ? (ಕೀರ್ತ. 119:32).

---

**ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :–**

---

1) ಮೇಣವು (ಕೀರ್ತ. 68:2).
2) ಹರ್ಷಿಸುವರು (ಕೀರ್ತ. 68:3).
3) ಬೆಳ್ಳಿಯಿಂದಲೂ, ಬಂಗಾರದಿಂದಲೂ (ಕೀರ್ತ.68:13)
4) ಹಿಮವು (ಕೀರ್ತ. 68:14).
5) ಮಹೋನ್ನತವಾಗಿದೆ (ಕೀರ್ತ. 68:15).
6) ಸುಖಾವಸ್ಥೆಗೆ (ಕೀರ್ತ. 68:6).
7) ಘನಮಾನಗಳುಳ್ಳದ್ದು (ಕೀರ್ತ. 111:3).
8) ಸದಾಕಾಲವೂ (ಕೀರ್ತ. 111:3).
9) ಆಹಾರವನ್ನು (ಕೀರ್ತ. 111:5).
10) ವಿಮೋಚನೆಯನ್ನು (ಕೀರ್ತ. 111:9).

**ಜಾಹಿರಾತು**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು (ಕೀರ್ತ. 63:7).